ಸಂಪಾದಕರು: ರವಿಕುಮಾರ್ ಸಿ.ಹೆಚ್.

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYAPRAGATHI Kannada Daily

ಪ್ರತಿ ಸುದ್ದಿಯ ಧ್ವನಿ

suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 Issue: 44
ಸಂಪುಟ: 05 ಸಂಚಿಕೆ: 44
Date: 22-02-2026 Sunday
RNI NO : KARKAN/2021/80805 L2/RNP-1285/TMR/2025-27
Page :4 Price: 1.00
ಪುಟ : 4 ಬೆಲೆ: 1.00 ರೂ


## ರಾಜ್ಯದಲ್ಲಿ ವರ್ಗಾವಣೆ ಮಾಡಿಸಲು ಏಜೆಂಟರು ಶುರುವಾಗಿದ್ದಾರೆ

# ವರ್ಗಾವಣೆ ದಂಧೆ ಹೆಚ್ಚಾಗಿದೆ : ಖುದ್ದು ಒಪ್ಪಿಕೊಂಡ ಸಿಎಂ

ಬೆಂಗಳೂರು: ಮೊದಲಿಗಿಂತಲೂ ಇತ್ತೀಚೆಗೆ ಭ್ರಷ್ಟಾಚಾರ ಹೆಚ್ಚಾಗಿದೆ. ವರ್ಗಾವಣೆ ಮಾಡಿಸಲು ಏಜೆಂಟರು ಶುರುವಾಗಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿವಿಧ ಹುದ್ದೆಗಳಿಗೆ ನೇಮಕಾತಿ ಹೊಂದಿದವರಿಗೆ ನೇಮಕಾತಿ ಆದೇಶ ನೀಡುವ ಅಭಯ ಹಸ್ತ ಕಾರ್ಯಕ್ರಮವನ್ನು ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿತ್ತು. ಅಲ್ಲಿ ಮಾತನಾಡಿದ ಮುಖ್ಯಮಂತ್ರಿಯವರು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ತಮ ಸರ್ಕಾರ ನೇಮಕಾತಿ ಮತ್ತು ವರ್ಗಾವಣೆಗೆ ಕೌನ್ಸಿಲಿಂಗ್ ಪದ್ಧತಿಯನ್ನು ಅಳವಡಿಸಿದೆ ಎಂದು ಹೇಳಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವೈದ್ಯರು ಸೇರಿದಂತೆ 5700 ಹುದ್ದೆಗಳಿಗೆ ಕೌನ್ಸಲಿಂಗ್ ಮೂಲಕ ವರ್ಗಾವಣೆ ಮಾಡಲಾಗಿದೆ. ನೇಮಕಾತಿ ಮತ್ತು ವರ್ಗಾವಣೆಯಲ್ಲಿ ಭ್ರಷ್ಟಾಚಾರ ನಡೆಯಬಾರದು. ಯಾರು ಕೂಡ ಶಿಫಾರಸು ಮಾಡಿಸಲು ಬೇರೆಯವರ ಬಳಿ ಹೋಗಬೇಡಿ ಎಂದು ಸಲಹೆ ನೀಡಿದರು.

ನಮಲ್ಲಿ ವರ್ಗಾವಣೆಗೆ ಏಜೆಂಟ್‌ಗಳು ಶುರುವಾಗಿದ್ದಾರೆ. ಯಾರಿಗೆ ಯಾರು ಹತ್ತಿರ ಇದ್ದಾರೆ ಎಂಬುವವರನ್ನೆಹುಡುಕುತ್ತಾರೆ. ಅವರ ಮೂಲಕ ವರ್ಗಾವಣೆ ಮಾಡಿಸಲು ಯತ್ನಿಸುತ್ತಾರೆ. ಇಂತಹ ಸಂದರ್ಭದಲ್ಲಿ ವರ್ಗಾವಣೆ ಮಾಡಿಸಿಕೊಳ್ಳಬೇಕಾದವರು ಏಜೆಂಟರಿಗೆ ಮತ್ತು ಪ್ರಭಾವಿಗಳಿಗೆ ಹಣ ನೀಡುವ ಪರಿಸ್ಥಿತಿ ಬರುತ್ತದೆ. ನಾನು 40 ವರ್ಷ ಶಾಸಕನಾಗಿ, ಸಚಿವನಾಗಿ ಮತ್ತು ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಈ



ಮೊದಲೆಲ್ಲಾ ಅಷ್ಟೊಂದು ಭ್ರಷ್ಟಾಚಾರ ಇರಲಿಲ್ಲ. ಈಗ ಹೆಚ್ಚಾಗುತ್ತಿದೆ ಎಂದು ಹೇಳಿದರು.

ವೈದ್ಯಕೀಯ ಸೇವೆಯಲ್ಲಿರುವವರು ಮಾನವೀಯತೆಯಿಂದ ನಡೆದುಕೊಳ್ಳಬೇಕು. ರೋಗಿಗಳನ್ನು ಕರುಣೆಯಿಂದ ನೋಡಬೇಕು. ಆಸ್ಪತ್ರೆಗಳಲ್ಲಿ ಒಳ್ಳೆಯ ಚಿಕಿತ್ಸೆ ಸಿಕ್ಕರೆ ಸರ್ಕಾರಕ್ಕೆ ಮತ್ತು ವೈದ್ಯರಿಗೆ ಒಳ್ಳೆಯ ಹೆಸರು ಬರಲಿದೆ. ಆರೋಗ್ಯ ಇಲಾಖೆಯ ನೇಮಕಾತಿಯನ್ನು ಒಂದು ವೃತ್ತಿಯನ್ನಾಗಿ ಮಾತ್ರ ನೋಡಬೇಡಿ. ಇದು ಮಹತ್ವದ ಜವಾಬ್ದಾರಿ. ಜನರ ಜೀವ ಉಳಿಸುವ ಕೆಲಸ ಎಂಬುದನ್ನು ನೆನಪಿನಲ್ಲಿ ಇರಿಸಿಕೊಳ್ಳಿ ಎಂದರು.

ತಮ ಸರ್ಕಾರ ಅಧಿಕಾರಕ್ಕೆ ಬರುವಾಗ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡುತ್ತೇವೆ ಎಂದು ಭರವಸೆ ನೀಡಲಾಗಿತ್ತು. ಅದನ್ನು ಈಡೇರಿಸುತಿದ್ದೇವೆ. ಅಧಿಕಾರಿಗಳು ಸರ್ಕಾರ ಮತ್ತು ಸಮಾಜದ ನಡುವೆ ಸೇತುವೆಯಂತೆ ಕೆಲಸ ಮಾಡುತ್ತಾರೆ. ಶಿಕ್ಷಣ, ಆರೋಗ್ಯ ಮತ್ತು ಪೊಲೀಸ್ ಇಲಾಖೆಗಳು ಅಗತ್ಯ ಸೇವೆಗಳಾಗಿವೆ. ಇದರಲ್ಲಿ ಹುದ್ದೆಗಳು ಖಾಲಿ ಇರಬಾರದು. ಅದಕ್ಕಾಗಿ ನೇಮಕಾತಿಯಲ್ಲಿ ಆದ್ಯತೆ ನೀಡಲಾಗಿದೆ ಎಂದರು. ಒಳ ಮೀಸಲಾತಿಯಿಂದಾಗಿ ನೇಮಕಾತಿ ವಿಳಂಬವಾಗಿದೆ. ಎಲ್ಲಾ ಇಲಾಖೆಗಳಲ್ಲಿ ಎರಡೂವರೆ ಲಕ್ಷ ಹುದ್ದೆಗಳು ಖಾಲಿ ಇವೆ. ಅವುಗಳಿಗೆ ಹಂತ ಹಂತವಾಗಿ ಭರ್ತಿ ಮಾಡಲಾಗುವುದು ಎಂದು ವಿವರಿಸಿದರು.ಆರೋಗ್ಯ ಇಲಾಖೆಗೆ ಸೇರಿದವರಿಗೆ ಮಾನವೀಯತೆ ಬಹಳ ಮುಖ್ಯ. ಜಾತಿ, ಧರ್ಮದ ತಾರತಮ್ಯ ಇರಬಾರದು. ಕಾಯಿಲೆ ಬಂದಾಗ ಯಾವುದೇ ಜಾತಿ ಇರುವುದಿಲ್ಲ. ಗುಣಮುಖರಾದಾಗ ಬಳಿಕ ಮತ್ತೆ ಜಾತಿ ಕೇಳುತ್ತಾರೆ. ಶಸ್ತ್ರ ಚಿಕಿತ್ಸೆಗೆ ಒಳಗಾಗುವಾಗ ಅಗತ್ಯ ಇರುವ ರಕ್ತ ಪಡೆಯಲು ಧರ್ಮ, ಜಾತಿ ನೋಡುವುದಿಲ್ಲ. ಮುಸ್ಲಿಂ, ಕ್ರೈಸ್ತ ಯಾರಾದರೂ ಸರಿ ಅವರಿಂದ ರಕ್ತ ಪಡೆದು ನಮ ದೇಹದ ಒಳಗೆ ಸೇರಿಸಿಕೊಳ್ಳುತ್ತೇವೆ. ಆ ಸಂದರ್ಭದಲ್ಲಿ ಧರ್ಮ ನೋಡುವುದಿಲ್ಲ. ಗುಣಮುಖರಾಗುತ್ತಿದ್ದಂತೆ ಮತ್ತೆ ಯಾವ ಜಾತಿ ಎಂದು ಕೇಳಲಾರಂಭಿಸುತ್ತಾರೆ ಎಂದರು.

ಜಾತಿ ಧರ್ಮ ವೈಯಕ್ತಿಕವಾದದ್ದು. ಅದನ್ನು ಮನೆಯಲ್ಲೇ ಬಿಟ್ಟು ಬನ್ನಿ ಎಂದು ಸಲಹೆ ನೀಡಿದ ಅವರು, ಚಿಕಿತ್ಸೆಗಿಂತಲೂ ಮುಂಜಾಗ್ರತೆ ಬಹಳ ಮುಖ್ಯ. ಆರೋಗ್ಯ ಇಲಾಖೆಗೆ ಸೇರ್ಪಡೆಯಾಗಿರುವ ಇತರ ಹುದ್ದೆಯವರು ವೈದ್ಯರಷ್ಟೆಮುಖ್ಯರಾಗಿರುತ್ತಾರೆ ಎಂದು ಹೇಳಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.


**ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ**

**ಜಾಹೀರಾತಿಗಾಗಿ ಸಂಪರ್ಕಿಸಿ: 9901010109**


## ಒಳ ಮೀಸಲಾತಿ ಜಾರಿಗೆ ತೀವ್ರ ಹೋರಾಟ: ಗೋವಿಂದ ಕಾರಜೋಳ

# ಮೀಸಲಾತಿ ಜಾರಿಯಲ್ಲಿ ಸರ್ಕಾರ ಮೀನಾ ಮೇಷ

ತುಮಕೂರು: ಮಾಜಿ ಉಪ ಮುಖ್ಯಮಂತ್ರಿ, ಹಾಲಿ ಸಂಸದ ಗೋವಿಂದ ಕಾರಜೋಳ ಅವರು ಶುಕ್ರವಾರ ಸಂಜೆ ನಗರದಲ್ಲಿ ತಮ್ಮ ಸಮುದಾಯದ ಮುಖಂಡರ ಸಭೆ ನಡೆಸಿ ಪರಿಶಿಷ್ಟ ಜಾತಿಯ ಒಳಮೀಸಲಾತಿ ಮಸೂದೆ ಅನುಮೋದನೆಗೆ ಸರ್ಕಾರದ ಮೇಲೆ ಒತ್ತಡ ಹೇರಲು ಹೋರಾಟ ತೀವ್ರಗೊಳಿಸುವಂತೆ ತಿಳಿಸಿದರು.

ಸಮುದಾಯದ ಮುಖಂಡ, ಜಿಲ್ಲಾ ಅಂಗವಿಕಲರ ಕಲ್ಯಾಣ ವೇದಿಕೆ ಅಧ್ಯಕ್ಷ ಗಂಗರಾಜು ಅವರ ರಿಂಗ್ ರಸ್ತೆಯಲ್ಲಿರುವ ನಿವಾಸಕ್ಕೆ ಭೇಟಿ ನೀಡಿದ ಕಾರಜೋಳ ಅವರು, ಒಳಮೀಸಲಾತಿ ಹೋರಾಟ ಕುರಿತು ಮುಖಂಡರೊಂದಿಗೆ ಚರ್ಚೆ ನಡೆಸಿದರು.

ಒಳಮೀಸಲಾತಿ ಜಾರಿಗೆ ಕಾಂಗ್ರೆಸ್ ಸರ್ಕಾರಕ್ಕೆ ಆಸಕ್ತಿ ಇದ್ದಂತೆ ಕಾಣುತ್ತಿಲ್ಲ, ಸರ್ಕಾರದ ಹಲವು ಸಚಿವರೇ ಒಳಮೀಸಲಾತಿ ಜಾರಿಯಾಗದಂತೆ ತಡೆಯುವ ಪ್ರಯತ್ನ ಮಾಡುತ್ತಿದ್ದಾರೆ, ಹೀಗಾಗಿ ಸರ್ಕಾರ ಕಣ್ಣು ಒರೆಸುವ ಹೇಳಿಕೆ ನೀಡುತ್ತಾ ಸಂವಿಧಾನದ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಮೌಲ್ಯಗಳಿಗೆ ಅನುಗುಣವಾಗಿ ಪರಿಶಿಷ್ಟ ಜಾತಿಯ 101 ಒಳ ಸಮುದಾಯಗಳಿಗೆ ನ್ಯಾಯಸಮ್ಮತ ಮಿಸಲಾತಿ ಕಲ್ಪಿಸಲು ಮಿನಾಮೇಷ ಎಣಿಸುತ್ತಿದೆ ಎಂದು ಹಲವು ಮುಖಂಡರು ಅಸಮಧಾನ ವ್ಯಕ್ತಪಡಿಸಿದರು.

ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಕಲ್ಪಿಸುವ ಸರ್ಕಾರದ ಆದೇಶಕ್ಕೆ ಕಾನೂನು ಬಲ ನೀಡುವ ಉದ್ದೇಶದಿಂದ ವಿಧಾನಮಂಡಲ ಅನುಮೋದನೆ ನೀಡಿದ್ದ ಮಸೂದೆ ಬಗ್ಗೆ ಕೆಲವು ಸ್ಪಷ್ಟನೆ ಕೇಳಿ ರಾಜ್ಯಪಾಲರು ಮಸೂದೆಯನ್ನು



ಸರ್ಕಾರಕ್ಕೆ ವಾಪಸ್ ಕಳಿಸಿದ್ದರು. ಇದರ ನಡುವೆ ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ, ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ನೇತೃತ್ವದ ಸಮುದಾಯದ ಮುಖಂಡರ ನಿಯೋಗ ರಾಜ್ಯಪಾಲರನ್ನು ಭೇಟಿ ಮಾಡಿ ಒಳಮೀಸಲಾತಿ ಮಸೂದೆ ಅನುಮೋದನೆಗೆ ಮನವಿ ಸಲ್ಲಿಸಿತ್ತು.

ಒಳಮೀಸಲಾತಿ ಮಸೂದೆ ಅನುಮೋದನೆಗೆ ಪೂರಕವಾಗಿ ಸರ್ಕಾರ ರಾಜ್ಯಪಾಲರಿಗೆ ಸ್ಪಷ್ಟ ವರದಿ ನೀಡಿ ಅನುಮೋದನೆಗೆ ಸಹಕರಿಸಬೇಕು ಎಂದು ಒತ್ತಾಯಿಸಿದ ಮುಖಂಡರು, ಒಳಮೀಸಲಾತಿ ಸಂಪೂರ್ಣ ಜಾರಿಯಾಗಲು ಹೋರಾಟವನ್ನು ತೀವ್ರಗೊಳಿಸಬೇಕಾಗಿದೆ. ನಾವು ಯಾರ ಸ್ವತ್ತನ್ನೂ ಕೇಳುತ್ತಿಲ್ಲ, ರಾಜ್ಯದಲ್ಲಿ ಅತಿ ಹೆಚ್ಚು ಜನಸಂಖ್ಯೆ ಇರುವ ನಮ್ಮ ಸಮುದಾಯವು ಸಾಂವಿಧಾನಿಕ ಹಕ್ಕನ್ನು ಕೇಳುತ್ತಿದೆ. ಈ ಬಗ್ಗೆ ಸರ್ಕಾರ ಹಾಗೂ ರಾಜ್ಯಪಾಲರು ನಮ್ಮ ಮನವಿಗೆ ಸ್ಪಂದಿಸಬೇಕು ಎಂದು ಗೋವಿಂದ ಕಾರಜೋಳ ಒತ್ತಾಯಿಸಿದರು. ತುಮಕೂರು ದೊಡ್ಡ ಜಿಲ್ಲೆ, ಇಲ್ಲಿ ನಮ್ಮ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ, ಇಲ್ಲಿಂದಲೇ ದೊಡ್ಡಮಟ್ಟದ ಹೋರಾಟ ರೂಪಿಸಬೇಕಾಗಿದೆ ಎಂದು ಹೇಳಿದರು.

ಮಾಜಿ ಶಾಸಕ ಕೆ.ಎಂ.ತಿಮ್ಮರಾಯಪ್ಪ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ವೈ.ಹೆಚ್.ಹುಚ್ಚಯ್ಯ, ಜಿಲ್ಲಾ ಅಂಗವಿಕಲರ ಕಲ್ಯಾಣ ವೇದಿಕೆ ಅಧ್ಯಕ್ಷ ಗಂಗರಾಜು, ಮುಖಂಡರಾದ ನರಸೀಯಪ್ಪ, ಕೊಟ್ಟ ಶಂಕರ್, ಹೊಳಕಲ್ಲು ಆಂಜನಪ್ಪ, ಪ್ರಭಾಕರ್, ಲಕ್ಷ್ಮಮ್ಮ, ಚಿಕ್ಕಣ್ಣ, ಸಿದ್ಧಗಂಗಮ್ಮ ಮತ್ತಿತರ ಮುಖಂಡರು ಭಾಗವಹಿಸಿದ್ದರು. ಈ ನಡುವೆ ಜಿಲ್ಲಾ ಜೆಡಿಎಸ್ ಅಧ್ಯಕ್ಷ, ಮಾಜಿ ಶಾಸಕ ಹೆಚ್.ನಿಂಗಪ್ಪ ಅವರು ಗೋವಿಂದ ಕಾರಜೋಳ ಅವರನ್ನು ಭೇಟಿ ಮಾಡಿ ಹೋರಾಟಕ್ಕೆ ಶುಭಕೋರಿದರು.


**ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ**


# ತುಮಕೂರು VV ಯಲ್ಲಿ ರೋಸ್ಟರ್ ರೂಪಿಸುವ ನಿರ್ಧಾರ

## ಅಸಂವಿಧಾನಿಕ ನಿರ್ಧಾರದಿಂದ ಹಿಂದೆ ಸರಿಯದಿದ್ದರೆ ಹೋರಾಟ

ತುಮಕೂರು: ನೇಮಕಾತಿ ಪ್ರಕ್ರಿಯೆಯಲ್ಲಿ ವಿಶ್ವ ವಿದ್ಯಾನಿಲಯವನ್ನೇ ಒಂದು ಘಟಕವಾಗಿ ಪರಿಗಣಿಸಿ ರೋಸ್ಟರ್ (ಮೀಸಲಾತಿ) ರೂಪಿಸಲು ರಾಜ್ಯ ಸಚಿವ ಸಂಪುಟದ ಉಪಸಮಿತಿಯು ನೀಡಿರುವ ತಾತ್ವಿಕ ಒಪ್ಪಿಗೆಯು ಅಸಂವಿಧಾನಿಕ ಹಾಗೂ ಮೀಸಲಾತಿ ವ್ಯವಸ್ಥೆಯನ್ನು ಬುಡಮೇಲು ಮಾಡುವ ಹುನ್ನಾರವಾಗಿದೆ ಎಂದು 'ತುಮಕೂರು ವಿಶ್ವವಿದ್ಯಾನಿಲಯದ ಸಾಮಾಜಿಕ ನ್ಯಾಯ ಪರ ವಿದ್ಯಾರ್ಥಿಗಳ ಒಕ್ಕೂಟ' ತೀವ್ರವಾಗಿ ಖಂಡಿಸಿದೆ.ಸರ್ಕಾರ ಕೂಡಲೇ ಈ ನಿರ್ಧಾರದಿಂದ ಹಿಂದೆ ಸರಿಯದಿದ್ದರೆ ರಾಜ್ಯಾದ್ಯಂತ ಕ್ರಾಂತಿಕಾರಿ ಪ್ರತಿಭಟನೆ ರೂಪಿಸಲಾಗುವುದು ಎಂದು ಒಕ್ಕೂಟ ಎಚ್ಚರಿಸಿದೆ.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಒಕ್ಕೂಟದ ವತಿಯಿಂದ ಆಯೋಜಿಸಲಾಗಿದ್ದ 'ದುಂಡುಮೇಜಿನ ತುರ್ತು ಸಭೆ'ಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ.

ಸಭೆಯಲ್ಲಿ ವಿಷಯ ಮಂಡಿಸಿ ಮಾತನಾಡಿದ ವಕೀಲ ರಂಗಧಾಮಯ್ಯ,ನೇಮಕಾತಿಯಲ್ಲಿವಿಶ್ವವಿದ್ಯಾನಿಲಯವನ್ನು ಘಟಕವನ್ನಾಗಿ ಮಾಡುವುದು ಸಂವಿಧಾನದ ವಿಧಿ 14(1)



ಮತ್ತು 16 (4)ರ ಸ್ಪಷ್ಟ ಉಲ್ಲಂಘನೆಯಾಗಿದೆ. 2016ರಲ್ಲಿ ಅಲಹಾಬಾದ್ ಹೈಕೋರ್ಟ್ ಹಾಗೂ ತದನಂತರ ಸುಪ್ರೀಂಕೋರ್ಟ್ ಕೂಡ ವಿಶ್ವವಿದ್ಯಾನಿಲಯಗಳನ್ನು ಘಟಕವಾಗಿ ಪರಿಗಣಿಸಬಾರದು, ಇದು ಅಸಂವಿಧಾನಿಕ ಎಂದು ತೀರ್ಪು ನೀಡಿವೆ. ಸುಪ್ರೀಂಕೋರ್ಟ್ ಆದೇಶಕ್ಕೂ ಬೆಲೆಕೊಡದೆ ಇಂತಹ ನಿರ್ಧಾರ ಕೈಗೊಳ್ಳುವುದು ಸಾಮಾಜಿಕ ನ್ಯಾಯಕ್ಕೆ ಬಗೆಯುವ ದ್ರೋಹವಾಗಿದೆ ಎಂದು ಸ್ಪಷ್ಟಪಡಿಸಿದರು.

ಒಳ ಮೀಸಲಾತಿ ಹೋರಾಟ ಸಮಿತಿಯ ಜಿಲ್ಲಾಧ್ಯಕ್ಷ ವೈ. ಕೆ. ಬಾಲಕೃಷ್ಣ ಮಾತನಾಡಿ, ಸಂವಿಧಾನದ ಆಶಯಗಳಿಗೆ ಬದ್ಧವಾಗಿರಬೇಕಾದ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಅವರೇ ಇಂತಹ ಮೀಸಲಾತಿ ವಿರೋಧಿ ಕಾನೂನು ರೂಪಿಸಲು ಉತ್ಸುಕರಾಗಿರುವುದು ದುರಂತ. ಶಿಕ್ಷಣ ಮತ್ತು ಉದ್ಯೋಗದಲ್ಲಿ ಸಮಾನತೆ ಕಾಪಾಡುವುದು ಸರ್ಕಾರದ ಜವಾಬ್ದಾರಿ. ಸರ್ಕಾರದ ಈ ನಿರ್ಧಾರದ ವಿರುದ್ಧ ಶೋಷಿತ ಹಾಗೂ ಹಿಂದುಳಿದ ವರ್ಗಗಳು ಎಚ್ಚೆತ್ತುಕೊಳ್ಳಬೇಕಿದೆ ಎಂದು ಹೇಳಿದರು.ವಿದ್ಯಾರ್ಥಿ ಒಕ್ಕೂಟದ ಮುಖಂಡರಾದ ಗಂಗಾಧರ್ ಬಾಣಸಂದ್ರ, ನವೀನ್ ಕುಮಾರ್ ಪಿ.ಆರ್., ಧರ್ಮಣ್ಣ ಎಂ.ರಂಗನಾಥ್,ಭೀಮ್ ಶಿ ರಮೇಶ್ ಎಂ.ಟಿ., ಮಾರುತೇಶ್ ಹಾಗೂ ಸುರೇಶ್ ನೇತೃತ್ವದಲ್ಲಿ ನಡೆದ ಈ ಸಭೆಯಲ್ಲಿ, ಸರ್ಕಾರ ಸಾಮಾಜಿಕ ನ್ಯಾಯದ ವಿರುದ್ಧ ಯಾವುದೇ ತೀರ್ಮಾನ ಕೈಗೊಳ್ಳಬಾರದು ಎಂದು ಆಗ್ರಹಿಸಲಾಯಿತು.ಸಭೆಯಲ್ಲಿ ಹಿರಿಯ ಹೋರಾಟಗಾರರಾದ ಪ್ರೊ. ದೊರೈರಾಜು, ಡಾ. ಬಸವರಾಜು, ಕೊಟ್ಟ ಶಂಕರ್, ವೈ.ಹೆಚ್. ಹುಚ್ಚಯ್ಯ ಹಾಗೂ ಚಿಂತಕ ಡಾ. ರವಿಕುಮಾರ್ ನೀಹ,ಹೆತ್ತೇನಹಳ್ಳಿ ಮಂಜುನಾಥ್, ಶ್ರೀನಿವಾಸ್ ಇದ್ದರು.

## ದಲಿತ ನವ ದಂಪತಿಗೆ ದೇವಸ್ಥಾನ ಪ್ರವೇಶಕ್ಕೆ ನಿರಾಕರಣೆ:

# ದೇವರು ಮೈ ಮೇಲೆ ಬಂದ ವ್ಯಕ್ತಿ ಬಂಧನ



ತುಮಕೂರು: ಮೈ ಮೇಲೆ ದೇವರು ಬಂದಂತೆ ನಾಟಕವಾಡಿದ ವ್ಯಕ್ತಿಯೊಬ್ಬ ಹೊಸದಾಗಿ ಮದುವೆಯಾಗಿ ದೇವಸ್ಥಾನಕ್ಕೆ ಬಂದ ದಲಿತ ದಂಪತಿಯನ್ನು ಹೊರಗೆ ಕಳಿಸಿ ಅಸ್ಪೃಶ್ಯತೆ ಆಚರಣೆ ಮಾಡಿರುವ ಘಟನೆ ತುಮಕೂರು ಜಿಲ್ಲೆಯ ತುರುವೇಕೆರೆ ತಾಲೂಕಿನ ಗೋಣಿ ತುಮಕೂರಿನಲ್ಲಿ ಫೆ.20ರಂದು ನಡೆದಿರುವ ವಿಡಿಯೋ ವೈರಲ್ ಆಗಿದೆ.

ಗೃಹ ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ್ ಅವರ ಜಿಲ್ಲೆಯಲ್ಲೇ ಇಂತಹ ಹೇಯ ಘಟನೆ ನಡೆದಿರುವುದು ವ್ಯಾಪಕ ಚರ್ಚೆಗೆ ಕಾರಣವಾಗಿದೆ.

ತುರುವೇಕೆರೆ ತಾಲೂಕು ಗೋಣಿತುಮಕೂರಿನ ಅರಸಮ್ಮ ದೇವಾಲಯಕ್ಕೆ ದಲಿತರಾದ ನವದಂಪತಿ ಶುಕ್ರವಾರ ಬಂದಿದ್ದಾರೆ. ಇದನ್ನು ಗಮನಿಸಿದ ಮೇಲ್ ಜಾತಿಯ ವ್ಯಕ್ತಿ ನಾರಾಯಣಪ್ಪ ನೂತನ ದಂಪತಿಯನ್ನು ನೇರವಾಗಿ ಕಳಿಸಿದರೆ ಸಮಸ್ಯೆಯಾಗುತ್ತದೆ ಎಂದು ತಿಳಿದು ಮೈಮೇಲೆ ದೇವರು ಬಂದಂತೆ ನಾಟಕವಾಡಿದ್ದಾರೆ.

ದೇವರು ಮೈದುಂಬಿಕೊಂಡ ನಾರಾಯಣಪ್ಪ



'ನೀವು ದಲಿತರು, ದಲಿತರಿಗೆ ದೇವಾಲಯದ ಒಳಗೆ ಪ್ರವೇಶವಿಲ್ಲ, ನಡಿ ಆಚಗೆ ಎಂದು ದಬ್ಬಾಳಿಕೆಯಿಂದ ದಲಿತ ನವದಂಪತಿ ಮತ್ತು ಅವರ ಕುಟುಂಬವನ್ನು ಹೊರಗೆ ಕಳಿಸಿ, ನಿಮ್ಮ ಪ್ರವೇಶದಿಂದ ಪುಣ್ಯ ಮಾಡಿಸಬೇಕು ಎಂದು ಅಸ್ಪೃಶ್ಯತೆ ಆಚರಣೆ ಮಾಡಿರುವ ವಿಡಿಯೋ ಎಲ್ಲರ ಮೊಬೈಲ್ ನಲ್ಲಿ ಹರಿದಾಡುತ್ತಿದೆ.

ಗ್ರಾಮಸ್ಥರ ನಡವಳಿಕೆಯಿಂದ ಬೇಸತ್ತ ಜಗದೀಶ್ ದಂಪತಿ ತುರುವೇಕೆರೆ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ ಹಿನ್ನೆಲೆಯಲ್ಲಿ ಎಆರ್ ದಾಖಲಾಗಿದೆ. ನಾರಾಯಣಪ್ಪ, ಪ್ರಭಾ, ಕಾಂತಣ್ಣ, ಅಮೂಲ್ಯ, ಪುಟ್ಟೇಗೌಡ, ಪದ್ಮ ಮತ್ತು ಇತರರ ಮೇಲೆ ಎಫ್‌ಆರ್ ದಾಖಲಿಸಲಾಗಿದೆ. ದೇವರು ಮೈ ಮೇಲೆ ಬಂದಂತೆ ನಾಟಕವಾಡಿದ್ದ ನಾರಾಯಣಪ್ಪನನ್ನು ಪೊಲೀಸರು ಬಂಧಿಸಿದ್ದಾರೆ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ದೌರ್ಜನ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದು ಉಳಿದವರಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ.

## 'ಜೆಡಿಎಸ್‌ನ ಶಕ್ತಿಯಾಗಿರುವ ಕಾರ್ಯಕರ್ತರು ಅಧಿಕಾರಿ ಪಡೆಯಿರಿ'



ತುಮಕೂರು: ಅಂದಿನಿಂದ ಇಂದಿನವರೆಗೂ ಜೆಡಿಎಸ್ ಕಾರ್ಯಕರ್ತರ ಪಕ್ಷವಾಗಿ ಉಳಿದು ಬೆಳೆದಿದೆ. ಇಲ್ಲಿ ಬೆಳೆದು ಉನ್ನತ ಸ್ಥಾನಕ್ಕೆ ಏರಿದವರು ಪಕ್ಷ ಬಿಟ್ಟುಹೋದರೂ ಕಾರ್ಯಕರ್ತರು ಪಕ್ಷದ ಶಕ್ತಿಯಾಗಿದ್ದಾರೆ. ಇಂತಹ ಕಾರ್ಯಕರ್ತರಿಗೆ ರಾಜಕೀಯ ಅಧಿಕಾರ ಸಿಗಬೇಕು. ಕಾರ್ಯಕರ್ತರು ಅಧಿಕಾರ ಪಡೆಯುವಂತರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಮ್ಮ ಮುಂದಿದೆ. ಪಕ್ಷವನ್ನು ಬೂತ್ ಮಟ್ಟದಿಂದ ಸಂಘಟಿಸಿ ಚುನಾವಣೆಗೆ ಸಜ್ಜಾಗಬೇಕು ಎಂದು ಜೆಡಿಎಸ್ ಯುವ ಘಟಕ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಾರ್ಯಕರ್ತರಿಗೆ ಮನವಿ ಮಾಡಿದರು.

ತಾಲ್ಲೂಕಿನ ನಾಗವಲ್ಲಿಯಲ್ಲಿ ಶನಿವಾರ ನಡೆದ ತುಮಕೂರು ಗ್ರಾಮಾಂತರ ಕ್ಷೇತ್ರದ ಜನರೊಂದಿಗೆ ಜನತಾದಳ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಮಾಜಿ ಪ್ರಧಾನಿ ದೇವೇಗೌಡರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರು ಕಾಳಜಿಯಿಂದ ಕಟ್ಟಿದ ಜೆಡಿಎಸ್ 25 ವರ್ಷ ಪೂರೈಸಿದೆ. ಇದರ ಯಶಸ್ಸು ಕಾರ್ಯಕರ್ತರಿಗೆ ಸಲ್ಲಬೇಕು. ಎಂತಹ ಕಷ್ಟಕಾಲದಲ್ಲೂ ಕಾರ್ಯಕರ್ತರು ಪಕ್ಷವನ್ನು ಬಿಡದೆ ಬೆಂಬಲಿಸಿದ್ದಾರೆ. ಮುಂದೆ ರಾಜ್ಯದಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬರಬೇಕು. ಈಗಿನಿಂದಲೇ ತಳಮಟ್ಟದಿಂದ ಪಕ್ಷ ಸಂಘಟಿಸಬೇಕು. ಜಿಲ್ಲೆಯಲ್ಲಿ ಈ ಹಿಂದೆ 11 ವಿಧಾನಸಭಾ ಕ್ಷೇತ್ರಗಳಲ್ಲಿ 9 ಸ್ಥಾನಗಳನ್ನು ಗೆಲ್ಲಿಸಿ ತುಮಕೂರು ಜಿಲ್ಲೆ ಕೊಡುಗೆ ನೀಡಿದೆ ಅಂತಹ ಸುವರ್ಣ ಕಾಲ 2028ಕ್ಕೆ ಮರುಕಳಿಸಬೇಕು ಎಂದು ವಿನಂತಿಸಿದರು.

ಜೆಡಿಎಸ್ ನಾಯಕರನ್ನು ತಯಾರಿಸುವ ಕಾರ್ಖಾನೆಯಾಗಿದೆ. ಇಲ್ಲಿ ನಾಯಕರಾಗಿ ಬೆಳೆದು ಉನ್ನತ ಸ್ಥಾನ ಪಡೆದ ಸುಮಾರು 50ಕ್ಕೂ ಹೆಚ್ಚು ನಾಯಕರು ಜೆಡಿಎಸ್ ಬಿಟ್ಟುಹೋಗಿ ಬೇರೆ ಪಕ್ಷ ಸೇರಿದ್ದಾರೆ. ಚುನಾವಣೆಗಳಲ್ಲಿ ತಮ್ಮನ್ನು ಗೆಲ್ಲಿಸಿದ, ರಾಜಕೀಯವಾಗಿ ಬೆಳೆಸಿದ ಕಾರ್ಯಕರ್ತರನ್ನು ಬೀದಿಯಲ್ಲಿ ಬಿಟ್ಟುಹೋಗುವುದು ನಾಯಕನಾದವನಿಗೆ ಶೋಭೆತರುವುದಿಲ್ಲ. ನಾಯಕರು ಹೋದರೂ ನಾಯಕರನ್ನು ರೂಪಸುವ ಶಕ್ತಿವಂತ, ಚಿನ್ನದಂತ ಕಾರ್ಯಕರ್ತರು ನಮ್ಮ ಜೊತೆ ಇದ್ದಾರೆ, ಯಾರೇ ಕೈ ಬಿಟ್ಟರೂ ನಾವು ನಿಮ್ಮನ್ನು ಬಿಡುವುದಿಲ್ಲ, ನಿಮ್ಮ ಜೊತೆಗಿರುತ್ತೇವೆ ಎಂದು ನಿಖಿಲ್ ಕುಮಾರಸ್ವಾಮಿ ಹೇಳಿದರು.

ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿಯಿಲ್ಲ

ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ರೈತರ ಬಗ್ಗೆ ಕಿಂಚಿತ್ತೂ ಕಾಳಜಿ, ಬದ್ಧತೆ ಇಲ್ಲ, ರೈತರ ಯಾವ ಸಮಸ್ಯೆಗಳಿಗೂ ಸ್ಪಂದಿಸುತ್ತಿಲ್ಲ. ಈ ಸರ್ಕಾರದ ಅವಧಿಯಲ್ಲಿ 2800ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಈ ಜಿಲ್ಲೆಯ 40ಕ್ಕೂ ಹೆಚ್ಚು ರೈತರು ಜೀವ ಕಳೆದುಕೊಂಡಿದ್ದಾರೆ. ಅತಿವೃಷ್ಟಿ, ಅನಾವೃಷ್ಟಿಯಿಂದ ಸಂಕಷ್ಟದ ರೈತರಿಗೆ ಪರಿಹಾರ ನೀಡಿ, ಅವರಿಗೆ ಸ್ಪಂದಿಸುವ ಪ್ರಯತ್ನವನ್ನು ಈ ಸರ್ಕಾರ ಮಾಡಲಿಲ್ಲ ಜೆಡಿಎಸ್ ಗೆ ಮತ್ತೆ ಸವರ್ಣ ಕಾಲ ಮರುಕಳಿಸಲಿ ಎಂದರು.

## ಸಾಮಾಜಿಕ ನ್ಯಾಯ ಎಂದರೆ ಸರ್ವ ಸಮಾನತೆ–ಸಿದ್ದರಾಮಯ್ಯ

ಕನ್ನಡ ನೆಲದಲ್ಲಿ ಬಸವಾದಿ ಶರಣರಿಂದ ಆರಂಭವಾದ ಸಾಮಾಜಿಕ ನ್ಯಾಯದ ಚಳವಳಿಯನ್ನು ಬಳಿಕ ಸರ್ವಜ್ಞ, ಸೂಫಿ ಸಂತರು, ನಾರಾಯಣ ಗುರು, ಕನಕದಾಸರು ಸೇರಿದಂತೆ ಹಲವಾರು ಸಮಾಜ ಸುಧಾರಕರು ಮುಂದುವರಿಸಿಕೊಂಡು ಬಂದಿದ್ದಾರೆ. ಬಾಬಾ ಸಾಹೇಬರು ಈ ಆಶಯಗಳಿಗೆ ಸಾಂವಿಧಾನಿಕ ರಕ್ಷಣೆ ನೀಡಿ, ಕಾನೂನಿನ ಬಲ ತುಂಬಿದ್ದಾರೆ. ಆದರೂ ಇಂದಿಗೂ ಅಸಮಾನತೆ, ಶೋಷಣೆಗಳು ಜೀವಂತವಾಗಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಜಾತಿ, ಧರ್ಮ, ಲಿಂಗ, ಭಾಷೆ, ಬಣ್ಣ ಈ ಯಾವುದರ ಮೇಲೂ ತಾರತಮ್ಯ ಮಾಡದೆ, ಪ್ರತಿ ವ್ಯಕ್ತಿಗೂ ಸಮಾನ ಅವಕಾಶ, ಹಕ್ಕುಗಳನ್ನು ನೀಡುವುದೇ ಸಾಮಾಜಿಕ ನ್ಯಾಯ. ಇದಕ್ಕಾಗಿಯೇ ನನ್ನ ನಾಲ್ಕು ದಶಕಗಳ ರಾಜಕೀಯ ಜೀವನವನ್ನು ಮುಡಿಪಿಟ್ಟಿದ್ದೇನೆ, ನನ್ನ ಕೊನೆಯ ಉಸಿರಿರುವವರೆಗೂ ಅವಕಾಶ ವಂಚಿತ ಜನರ ಪರವಾಗಿಯೇ ನಿಲ್ಲುತ್ತೇನೆ ಎಂದು ತಿಳಿಸಿದ್ದಾರೆ.

ವಿಶ್ವ ಸಾಮಾಜಿಕ ನ್ಯಾಯದ ದಿನವಾದ ಅಂದು ಸಾಮಾಜಿಕ ನ್ಯಾಯದ ಬಂಡಿಯನ್ನು ಇನ್ನಷ್ಟು ಮುಂದಕ್ಕೆ ಕೊಂಡೊಯ್ಯುವ ಸಂಕಲ್ಪಗೈಯ್ಯೋಣ. ಸಮಸಮಾಜಕ್ಕಾಗಿ ಜೊತೆಗೂಡಿ ಶ್ರಮಿಸೋಣ ಎಂದು ಮುಖಪುಟದಲ್ಲಿ ಬರೆದುಕೊಂಡಿದ್ದಾರೆ."ಸಾಮಾಜಿಕ ನ್ಯಾಯವೆಂದರೆ ನಾನು ಆರಿಸಿಕೊಂಡ ಬದುಕಿನ ಹಾದಿ" ಸಾಮಾಜಿಕ ನ್ಯಾಯ ಎನ್ನುವುದು ನನ್ನ ಪಾಲಿಗೆ ಒಂದು ಸಿದ್ಧಾಂತ ಅಲ್ಲ, ಅದು ಸರ್ವ ಸಮಾನತೆಯ ಗುರಿಯನ್ನು ತಲುಪಲು ನಾನು ಆರಿಸಿಕೊಂಡ ಬದುಕಿನ ಹಾದಿ ಎಂದು ತಿಳಿಸಿದ್ದಾರೆ.



ಸಾಮಾನ್ಯವಾಗಿ ಸಾಮಾಜಿಕ ನ್ಯಾಯ ಎಂದರೆ ಯಾರಿಂದಲೋ ಕಿತ್ತು, ಇನ್ನಾರಿಗೋ ಹಂಚುವ ಜನವಿರೋಧಿಯಾದ, ತಾರತಮ್ಯದ ನೀತಿ ಎಂಬಂತೆ ಬಿಂಬಿಸಲಾಗುತ್ತಿದೆ. ಸಂಪತ್ತು, ಅಧಿಕಾರ ಮತ್ತು ಅವಕಾಶಗಳು ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು. ಅಭಿವೃದ್ಧಿಯ ಫಲವನ್ನು ಜಾತಿ, ಧರ್ಮ, ಪ್ರದೇಶಗಳ ಭೇದವಿಲ್ಲದೆ ಸರ್ವರಿಗೂ ಸಮಾನವಾಗಿ ಹಂಚಿಕೆಯಾಗಬೇಕೆನ್ನುವುದು ಸಂವಿಧಾನದ ಆಶಯವಾಗಿ ಹೊರಹೊಮ್ಮಿರುವ ಸಾಮಾಜಿಕ ನ್ಯಾಯದ ಪರಿಕಲ್ಪನೆ ಎಂದಿದ್ದಾರೆ.

ಇದೇ ನಿಜವಾದ ವೈಜ್ಞಾನಿಕವಾದ ಅಭಿವೃದ್ಧಿ ಮಾದರಿ. ಜಾತಿ, ಲಿಂಗ, ವರ್ಗ, ಪ್ರದೇಶಗಳ ತಾರತಮ್ಯ ನಿವಾರಣೆಗಳ ಜೊತೆಯಲ್ಲಿ ನಗರ ಮತ್ತು ಹಳ್ಳಿಗಳ ನಡುವಿನ ಅಂತರವನ್ನು ನಿವಾರಿಸುವುದು ಕೂಡಾ ಸಾಮಾಜಿಕ ನ್ಯಾಯವೇ ಆಗಿದೆ ಎಂದು ತಿಳಿಸಿದ್ದಾರೆ.

# ತುಮಕೂರಿನ ಕ್ಯಾಲ್ಸಿ ಅಬಾಕಸ್‌ನ ಶಾಲೆಯ ಇಬ್ಬರಿಗೆ ಮಕ್ಕಳಿಗೆ ರಾಜ್ಯಮಟ್ಟದ ಪ್ರಶಸ್ತಿ

ತುಮಕೂರು: ನಗರದ ಕ್ಯಾಲ್ಸಿ ಅಬಾಕಸ್ ಶಾಲೆಯಲ್ಲಿ ಅಧ್ಯಯನ ಮಾಡಿದ ಮಕ್ಕಳು, ಹುಬ್ಬಳ್ಳಿಯಲ್ಲಿ ನಡೆದ ರಾಜ್ಯ ಮಟ್ಟದ ಅಬ್ಯಾಕಸ್ ಸ್ಪರ್ಧೆ–2026ರಲ್ಲಿ ಒರ್ವ ಪ್ರಥಮ ಸ್ಥಾನ ಗಳಿಸಿದರೆ, ಮತ್ತೊಬ್ಬರು ದ್ವಿತೀಯ ಸ್ಥಾನ ಗಳಿಸಿದರು. ಅಲ್ಲದೆ 26 ವಿದ್ಯಾರ್ಥಿಗಳು ಅಬಾಕಸ್ ನಲ್ಲಿ ಪದವಿ ಪೂರ್ಣಗೊಳಿಸಿದ್ದಾರೆ.

ನಗರದ ಮಾರುತಿ ನಗರದ ತುಮಕೂರು ಜಿಲ್ಲಾ ಶ್ರೀ ವೈಷ್ಣವ ಸಮುದಾಯ ಭವನದಲ್ಲಿ ಏರ್ಪಟ್ಟ ಪ್ರಶಸ್ತಿ ವಿತರಣೆ ಮತ್ತು ಪದವಿ ಪ್ರದಾನ ಕಾರ್‍ಯಕ್ರಮವನ್ನು ಜ್ಯೋತಿ ಬೆಳಗುವುದರ ಮೂಲಕ ಮಾತನಾಡಿದ ಶೇಷಾದ್ರಿಪುರಂ ಶಾಲೆಯ ಪ್ರಾಂಶುಪಾಲರಾದ ನಂದಾ ಹೆಚ್.ಎನ್‌ರವರು ಗಣಿತ ಎನ್ನುವುದು ಸೊನ್ನೆಯಿಂದ ಆರಂಭಗೊಂಡು ಅನಂತ ಸಂಖ್ಯೆಗಳವರೆಗೆ ಮುಂದುವರೆಯುತ್ತದೆ. ಈ ಗಣಿತವನ್ನು ತುಂಬಾ ಏಕಾಗ್ರತೆಯಿಂದ ಮಕ್ಕಳು ಕಲಿಯಬೇಕು. ಇದು ಕಲಿಕೆಯಲ್ಲಿನ ಆಸಕ್ತಿ ಮತ್ತು ಕ್ರಿಯಾಶೀಲತೆಯನ್ನು ಬೆಳಸುತ್ತದೆ ಎಂದು ಹೇಳಿದರು.

ಅಬಾಕಸ್ ಕಲಿಯುವುದರಿಂದ ಮಕ್ಕಳ ವಿದ್ಯಾಬ್ಯಾಸದಲ್ಲಿಯೂ ಉತ್ತಮ ಬೆಳವಣಿಗೆಯಾಗುತ್ತದೆ ಎಂದ ಅವರು ಗುಣಾಕಾರ ಹಾಗೂ ಭಾಗಾಕಾರದಂತಹ ಲೆಕ್ಕಗಳನ್ನು ವೇಗವಾಗಿ ಮಾಡಲು ಸಹಕಾರಿಯಾಗುತ್ತದೆ ಎಂದರು.




ತುಮಕೂರಿನ ಡಯಟ್ ನ ಅಧಿಕಾರಿ ಶ್ರೀರಂಗರಾಜು ಮಾತನಾಡಿ,ಮಕ್ಕಳಿಗೆ ಸರಿಯಾದ ರೀತಿಯಲ್ಲಿ ವಿದ್ಯಾಭ್ಯಾಸ ನೀಡುವುದರ ಜೊತೆಗೆ, ಬೇರೆ ಚಟುವಟಿಕೆಗಳಲ್ಲಿ ಬೇರೆ ಮಾಡಬೇಕು. ಟೇಬಲ್ ಟೆಲ್ಲಿಂಗ್ ಪ್ರಕ್ರಿಯೆಯನ್ನು ಕಲಿಯವುದರಿಂದ ಮಕ್ಕಳ ಮೆದುಳಿನ ಪ್ರಕ್ರಿಯೆ ವೇಗಗೊಳ್ಳುತ್ತದೆ. ಗಣಿತಶಾಸ್ತ್ರದಲ್ಲಿ ಹೆಚ್ಚು ಪರಿಣಿತಿ ಸಾಧಿಸುತ್ತಾರೆಂದು ಎಂದು ಹೇಳಿದರು.

ಅಬಾಕಸ್‌ನಲ್ಲಿ ಪದವಿ ಗಳಿಸಿದವರಿಗೆ ಪದವಿ ಪತ್ರ ವಿತರಿಸಿದ ಶ್ರೀ ಸಿದ್ದಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ.ಬಿ.ಟಿ.ಮುದ್ದೇಶ್ ಮಾತನಾಡಿ, ಈಗಿನ ಪ್ರಪಂಚಕ್ಕೆ ಅನುಗುಣವಾಗಿ ನಮ್ಮ ಮಕ್ಕಳನ್ನು ಸಿದ್ದಪಡಿಸಬೇಕು. ಅವರಿಗೆ ಗುಣಮಟ್ಟದ ಶಿಕ್ಷಣ ಮತ್ತು ಜ್ಞಾನದ ಅರಿವನ್ನು ನೀಡಬೇಕು. ಇಲ್ಲದಿದ್ದರೆ ಮುಂದೆ ಅವರ ಜೀವನದಲ್ಲಿ ಈ ಪ್ರಪಂಚವನ್ನು ಎದುರಿಸಲು ಆಗುವುದಿಲ್ಲ ಎಂದು ಹೇಳಿದರು.

ಅಬಾಕಸ್‌ನಲ್ಲಿ ಶಿಕ್ಷಣ ಪಡೆಯುವುದರಿಂದ ಮಕ್ಕಳು ಕ್ಯಾಲ್ಕುಲೇಟರ್‌ಗಿಂತಲೂ ವೇಗವಾಗಿ ಲೆಕ್ಕ ಮಾಡುವುದನ್ನು ಕಲಿಯಬಹುದು. ಮಕ್ಕಳಲ್ಲಿ ಗಣಿತದ ಮೇಲಿನ ಭಯ ಹೋಗಲಾಡಿಸಿ ಆತ್ಮವಿಶ್ವಾಸ ಬೆಳೆಸುವಲ್ಲಿ ಅಬಾಕಸ್ ಒಂದು ಉತ್ತಮವಾದ ಸಾಧನವಾಗಿದೆ ಎಂದು ಅವರು ತಿಳಿಸಿದರು. 'ಕಾರ್ಯಕ್ರಮದಲ್ಲಿ ಅಬಾಕಸ್ ಶಾಲೆಯ ಪ್ರಾಂಶುಪಾಲರಾದ ಸೌಮ್ಯ ಎಸ್ ಶಿರೂರ್, ನಗರ ಶಾಖೆಯ ಮುಖ್ಯಸ್ಥ ಸಂತೋಷ್ ಪಿ ಶಿರೂರ್, ಶಿಕ್ಷಕಿ ಚೇತನ ಬೋಧಕ ಸಿಬ್ಬಂದಿ ಮತ್ತು ಮಕ್ಕಳು ಪಾಲಕರು ಭಾಗವಹಿಸಿದ್ದರು. ಶಿಕ್ಷಕಿ ನಾಗರತ್ನಮ್ಮ ಕಾರ್ಯಕ್ರಮ ನಿರೂಪಿಸಿದರು.

**ಪ್ರಶಸ್ತಿ:**

ಹುಬ್ಬಳ್ಳಿಯಲ್ಲಿ ನಡೆದ ರಾಜ್ಯಮಟ್ಟದ 10 ವಿಭಾಗಗಳ ಸ್ಪರ್ಧೆಯಲ್ಲಿ 1750 ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದ ತುರುಸಿನ ಅಬಾಕಸ್ ಸ್ಪರ್ಧೆಯಲ್ಲಿ ತುಮಕೂರಿನ ಕ್ಯಾಲ್ಸಿ ಅಬ್ಯಾಕಸ್ ಅಕಾಡೆಮಿ ಎಲ್. ಆದ್ಯಗೌಡ–ಪ್ರಥಮ ಬಹುಮಾನ ಹಾಗೂ ಪಿ. ಎಂ. ಸಮರ್ಥ್ ದ್ವಿತೀಯ ಬಹುಮಾನ ಪಡೆದರೆ, 17 ಸಮಾಧಾನಕರ ಪ್ರಶಸ್ತಿಗೆ ಪಾತ್ರರಾದರು.ಇದೆ ಸಂದರ್ಭದಲ್ಲಿ ಅಬಾಕಸ್‌ನಲ್ಲಿ 26 ವಿದ್ಯಾರ್ಥಿಗಳು ತಮ್ಮ ಅಧ್ಯಯನ ಪೂರ್ಣಗೊಳಿಸಿ ಪದವಿ ಪ್ರಮಾಣ ಪತ್ರ ಪಡೆದರು.

# "ದುರ್ಬಲತೆ, ದೌರ್ಬಲ್ಯವಲ್ಲ ಪ್ರಬಲತೆ ಆಳುವುದಕಲ್ಲ"

"ದುರ್ಬಲತೆ, ದೌರ್ಬಲ್ಯವಲ್ಲ ಪ್ರಬಲತೆ ಆಳುವುದಕಲ್ಲ" ಎಂಬ ಸಂದೇಶದೊಂದಿಗೆ ಜೀತ ಪದ್ಧತಿಯ ಕ್ರೂರತೆಯನ್ನು ಎತ್ತಿ ತೋರಿಸುವ ಸಾಲದ ಮಗು(**Salada Magu Folk Play Performance**) ಜಾನಪದ ನಾಟಕ ದಿನಾಂಕ:15–01–2026ರಿಂದ19–01–2026ರವರೆಗೆ ಬೆಂಗಳೂರಿನ ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘವು ಭಾರತ ಸರ್ಕಾರದ ಸಂಸ್ಕೃತಿ ಇಲಾಖೆಯ ಸಹಕಾರ (**Assistance By Ministry Of Culture Government Of India**)ದಿಂದ ರಾಜ್ಯ ಮಟ್ಟದ ಐದು ದಿನಗಳ ಜಾನಪದ ನಾಟಕಗಳ ಉತ್ಸವ (**State Level Five Days Folk Plays Utsav**)ವನ್ನು ಬೆಂಗಳೂರಿನ ನೆಲಗದರನಹಳ್ಳಿಯಲ್ಲಿರುವ ನ್ಯೂ ಮಂಜುಳ ಪಬ್ಲಿಕ್ ಸ್ಕೂಲ್ (**New Manjula Public School**)ನ ಸಮುಚ್ಛಯಕ್ಕೆ ಸೇರಿದ ಶ್ರೀಮತಿ ಗಂಗಮ್ಮ ಶ್ರೀ ಪಟೇಲ್ ಮುದ್ದಭೈರಪ್ಪ ಸಭಾಂಗಣ (**Smt Gangamma Shri Patel Muddabyrappa Sabhangana**)ದಲ್ಲಿ ನಡೆಸಿತು.

ಜಾನಪದ ನಾಟಕಗಳ ಉತ್ಸವದಲ್ಲಿ ತುಮಕೂರಿನ ಅಮರೇಶ್ವರ ವಿಜಯ ನಾಟಕ ಮಂಡಳಿಯಿಂದ ಸಾಲದ ಮಗು (**Salada Magu**) ಎಂಬ ಜಾನಪದ ನಾಟಕ (**Folk Play Performance**) ಪ್ರದರ್ಶನಗೊಂಡಿತು.

ರಾಷ್ಟ್ರಕವಿ ಕುವೆಂಪುರವರ ಸಾಲದ ಮಗು ಜಾನಪದ ಕಥಾನಕವನ್ನು ಸ್ವಲ್ಪವು ಬದಲಾಯಿಸದೆ ಗಣಪಗೌಡರು ಯಥಾವತ್ತಾಗಿ ರಂಗರೂಪಕ್ಕೆ ಇಳಿಸಿದ್ದು, ಧನ್ವಂತ್ರಿ ಬಿ.ಎರವರು ನಿರ್ದೇಶಿಸಿದ್ದಾರೆ. ಕುವೆಂಪುರವರು ರಚಿಸಿದ ಮಹಾನ್ ಸಾಹಿತ್ಯ ಕೃತಿಗಳ ಜೊತೆಗೆ, ಅವರು ರಚಿಸಿದ 17 ಕಥೆಗಳು ಕೂಡ ಮಹತ್ವವಾದ ಸ್ಥಾನವನ್ನು ಪಡೆದಿವೆ. ಕುವೆಂಪುರವರ ಕಥೆಗಳನ್ನು ಜಾನಪದ ಹಾಗೂ ಶಿಕ್ಷಣ ತಜ್ಞರಾದ ಎಚ್.ಜೆ.ಲಕ್ಕಪ್ಪಗೌಡರು ಸಮರ್ಥವಾಗಿ ವಿಶ್ಲೇಷಿಸಿ, ಹೀಗೆ ಗುರುತಿಸಿದ್ದಾರೆ. ಕುವೆಂಪುರವರ ಕಥೆಗಳಲ್ಲಿ ವಸ್ತು ವೈವಿಧ್ಯವಿದೆ, ವರ್ಣನಾ ವೈವಿಧ್ಯವಿದೆ, ತಂತ್ರ ವೈವಿಧ್ಯವಿದೆ, ಪ್ರತಿಮಾ ವೈವಿಧ್ಯವಿದೆ,



ನಿರೂಪಣಾ ವೈವಿಧ್ಯವಿದೆ, ರಸವೈವಿಧ್ಯವಿದೆ, ಮೇಲಾಗಿ ಎಲ್ಲ ಕತೆಗಳ ಅಂತರಾಳದಲ್ಲೂ ಅಮೃತಶಕ್ತಿಯಾಗಿ ಪ್ರವಹಿಸುತ್ತಿರುವ ಅನನ್ಯ ಸಾಧಾರಣವಾದ ಅಗಾಧವಾದ ಲೋಕ ಪ್ರಜ್ಞೆಯಿದೆ. ನಿರ್ಮತ್ಸರಶೀಲವಾದ ಕಲಾತ್ಮಕ ಸಮತೋಲನದ ವಿಶಿಷ್ಟ ಸೌಂದರ್ಯ ದೃಷ್ಟಿಯಿದೆ; ಇವುಗಳೆಲ್ಲವನ್ನೂ ಜೀವಕಳೆಯಿಂದ ಕುಣಿಸಿ, ಮೆರೆಸಬಲ್ಲ ಮಾಂತ್ರಿಕ ಅಭಿವ್ಯಕ್ತಿ ಶಕ್ತಿಯಿದೆ.

ಹೀಗೆ ಲಕ್ಕಪ್ಪಗೌಡರು ಕುವೆಂಪುರವರ ಕಲ್ಪನಾ ಶಕ್ತಿಯನ್ನು, ಕಾವ್ಯಮಯವಾದ ಬರವಣಿಗೆಯ ಸೃಷ್ಠಿಯನ್ನು ಸಮರ್ಥವಾಗಿ ವಿಶ್ಲೇಷಿಸಿದ್ದು, ಕುವೆಂಪುರವರ ಸಣ್ಣ ಕಥೆಗಳಲ್ಲಿ ಅತ್ಯಂತ ಪ್ರಸಿದ್ಧವಾದ ಸಾಲದ ಮಗು ಕಥೆ ಈ ವಿಶ್ಲೇಷಣೆಯ ಎಲ್ಲ ಆಯಾಮಗಳನ್ನೊಳಗೊಂಡಿರುವ ಹಾಗೂ ಒಂದು ಸಾಮಾಜಿಕ ಸಮಸ್ಯೆ ಮೇಲೆ ಬೆಳಕು ಚೆಲ್ಲುವ ಪರಿಣಾಮಕಾರಿ ಕಥೆಯಾಗಿದೆ.

ಸಾಲದ ಮಗು ಕಥೆಯಲ್ಲಿ ಸುಬ್ಬು ಎಂಟು ಹತ್ತು ವರ್ಷದ ಹುಡುಗ. ಅವನ ತಂದೆ ರಂಗನು ಗೌಡರ ಒಕ್ಕಲಾಗಿದ್ದನು. ಸುಬ್ಬನ ತಾಯಿ ಮಗನನ್ನು ಹೆತ್ತ ಎರಡು ವರ್ಷಗಳಲ್ಲಿಯೇ ತೀರಿಹೋಗಿದ್ದಳು. ರಂಗನು ಮತ್ತೊಂದು ಮದುವೆ ಮಾಡಿಕೊಳ್ಳಬೇಕೆಂದು ಬಹಳ ಪ್ರಯತ್ನಪಟ್ಟನು. ಹೆಣ್ಣೂ ಕೂಡ ಗೊತ್ತಾಯಿತು. ಆದರೆ ಅದಕ್ಕೆ ಮುನ್ನೂರು ರೂಪಾಯಿ ತೆರ ಕೊಡಬೇಕೆಂದು ಹೆಣ್ಣಿನವರು ಕೇಳಿದರು. ಬಡವನಾದ ರಂಗನು ಒಡೆಯರಾದ ಗೌಡರ ಹತ್ತಿರ ಸಾಲ ಕೇಳಿದನು. ಗೌಡರು ಈಗಾಗಲೇ ರಂಗನ ಮೇಲೆ ಇದ್ದ ಮುನ್ನೂರು ರೂಪಾಯಿಗಳ ಸಾಲವನ್ನು ತೋರಿಸಿ, ಇನ್ನು ಒಂದು ಕಾಸನ್ನೂ ಕೊಡುವುದಕ್ಕಾಗುವುದಿಲ್ಲ ಎಂದರು. ಹೀಗಾಗಿ ರಂಗನ ಮದುವೆ ನಿಂತಿತು. ಕೆಲ ದಿನಗಳಲ್ಲಿಯೆ ರಂಗನಿಗೆ ರೇಷ್ಮೆ ಖಾಯಿಲೆ ಬಂದು ತೀರಿಹೋದನು. ಗೌಡರು ತಮ್ಮ ಸಾಲದ ಬಾಕಿಗಾಗಿ ಅವನ ಮಗ ಸುಬ್ಬನನ್ನು ಮನೆಯಲ್ಲಿ ಜೀತದಾಳನ್ನಾಗಿ ಮಾಡಿ ಇಟ್ಟುಕೊಂಡು, ಅಗಸರು ಕತ್ತೆಗಳ ಮೇಲೆ ಹೊರೆ ಹೊರಿಸುವಂತೆ ಆ ಬಾಲಕನ ಮೇಲೆ ಕೆಲಸಗಳನ್ನು ಹೇರತೊಡಗಿದರು. ಸುಬ್ಬನ ಕೈಲಿ ಆಗಲಿ–ಆಗದೇ ಹೋಗಲಿ ಕೆಲಸ ಮಾಡಲೇ ಬೇಕಿತ್ತು. ಗೌಡರು ಹುಡುಗನಿಗೆ ಬುದ್ದಿ ಬರಲಿ ಎಂದು ಆಗಾಗ ಹೊಡೆಯುತ್ತಿದ್ದರು. ಸುಬ್ಬನು ದಿನ ದಿನವೂ ಕೃಶನಾಗುತ್ತಿದ್ದನು. ಅವನ್ನೆಲ್ಲಿಯಾದರೂ ಜ್ವರ ಬಂದು ಮಲಗಿಕೊಂಡರೆ ಗೌಡರು ಎರಡು ಗುದ್ದು ಹೇರಿ ಕೆಲಸಕ್ಕೆ ದಬ್ಬುತ್ತಿದ್ದರು.

ಹೀಗೆ ಸುಬ್ಬುವಿನ ಜೀವನ ಬಾಲ್ಯದಲ್ಲೇ ಆಟ–ಪಾಠಗಳಿಂದ ವಂಚಿತವಾಗಿ, ಜನ ಸಂಪರ್ಕವಿಲ್ಲದೆ ಗೌಡನ ಕ್ರೌರ್ಯ ದಬ್ಬಾಳಿಕೆಗಳ ಸುಳಿಯಲಿ ಸಿಕ್ಕಿ, ಬರಿ ಕಷ್ಟ–ಕೊಟಲೆಗಳಲ್ಲೇ ಸಾಗುತ್ತಿರಲು, ಒಂದು ದಿನ ಅಮಾವಾಸೆಯ ಕಾರ್ಗತ್ತಲೆಯ ರಾತ್ರಿಯಲ್ಲಿ, ದಣಿದು ಗಾಢ ನಿದ್ರೆಯಲ್ಲಿ ಮುಳುಗಿದ್ದ ಸುಬ್ಬು ಸೊಗಸಾದ ಕನಸನ್ನು ಕಾಣುತ್ತಾನೆ. ಕನಸಿನಲ್ಲಿ ತನ್ನ ತಂದೆ ತಾಯಿಯರೊಡನೆ ಒಂದು ಸುಂದರವಾದ ಸೌಧದಲ್ಲಿ ಸುಬ್ಬು ನಲಿಯುತ್ತಿದ್ದನು. ಅಲ್ಲಿ ಬೇಕಾದಷ್ಟು ಉಡುಗೆ ತೊಡುಗೆಗಳನ್ನು ಧರಿಸಿದ್ದನು. ಅಲ್ಲಿ ಅವನು ಕೆಲಸ ಮಾಡಬೇಕಾಗಿಯೇ ಇರಲಿಲ್ಲ. ಅವನ ಕೈ–ಕಾಲುಗಳಿಗೆ ಆಳುಗಳಿದ್ದರು, ಜೊತೆಗೆ ಆಡಲು ಹುಡುಗರಿದ್ದರು. ವಿಧವಿಧವಾದ ಭಕ್ಷ್ಯ ಭೋಜ್ಯಗಳು ಅವನು ತಿಂದು–ತಿಂದು ಮಿಗುವಷ್ಟಿದ್ದವು. ಸುಬ್ಬನು ಜಾಗೃತಾವಸ್ಥೆಯಲ್ಲಿ ತನಗಿಲ್ಲದ ಸುಖಗಳನ್ನು, ಕೈಗೂಡದ ಬಯಕೆಗಳನ್ನು ಕನಸಿನಲ್ಲಿ ಪಡೆದು, ಆನಂದ ಪರವಶನಾಗಿದ್ದನು. ಅದೇ ದಿನ ಗೌಡ ತನ್ನ ಮನೆಯಿಂದ ಹತ್ತು ಫರ್ಲಾಂಗ್ ದೂರದಲ್ಲಿರುವ ಗದ್ದೆಯಲ್ಲಿ ಮೀನುಗಳನ್ನು ಬೀಳಿಸಿಕೊಳ್ಳಲು ಕೂಣೆಯನ್ನು ಹಾಕಿರುತ್ತಾನೆ. ಭಯಂಕರವಾದ ಗುಡುಗು ಸಿಡಿಲು ಸಮೇತವಾದ ಮಳೆಯು ಆರ್ಭಟಿಸುತ್ತಾ ಆರಂಭವಾಗಲು, ಆ ಶಬ್ಧಕ್ಕೆ ಎಚ್ಚರಗೊಂಡ ಗೌಡನು ಸುಬ್ಬನನ್ನು ನಾಲ್ಕೈದು ಬಾರಿ ಕೂಗುತ್ತಾನೆ ಆದರೆ, ಸುಖದ ಕನಸುಗಳನ್ನು ಕಾಣುತ್ತಾ ಮಲಗಿದ್ದ ಸುಬ್ಬ ಎಚ್ಚರಗೊಳ್ಳದಿರಲು ಗರ್ಜಿಸುತ್ತಾ, ಬೆತ್ತದಿಂದ ಹೊಡೆಯುತ್ತಾನೆ. ಆ ಏಟಿನ ನೋವನ್ನು ತಾಳಲಾರದೆ ಚೀರುತ್ತಾ ಎದ್ದ ಸುಬ್ಬನ ಕೈಗೆ ಲಾಟೀಲನ್ನು ಕೊಟ್ಟು, ಗದ್ದೆಯ ಬಳಿ ಹೋಗಿ ಕೂಣೆಯಲ್ಲಿರುವ ಮೀನುಗಳನ್ನು ತೆಗೆದುಕೊಂಡು ಬಾ ಎಂದು ಕಳುಹಿಸುತ್ತಾನೆ. ಭಯಂಕರ ಗಾಳಿ, ಮಳೆ, ಸಿಡಿಲು, ಮಿಂಚು, ಗುಡುಗುಗಳು ಇನ್ನೂ ನಿಂತಿರಲಿಲ್ಲ. ಹಾದಿಯ ತುಂಬ ಕೆಸರು, ಎಂಟು ಹತ್ತು ಫರ್ಲಾಂಗು ನಡೆಯಬೇಕು. ರೌದ್ರ ಪ್ರಕೃತಿಯ ಹೊರತು ಯಾವ ಜಂತುವೂ ಇಲ್ಲ. ಕಾಲುಜಾರಿ ಬಿದ್ದು ಲಾಟೀನು ಒಡೆದು ಹೋಗುತ್ತದೆ. ಮನೆಗೆ ಮೀನು ತರದೆ ಹಿಂದಿರುಗಿದರೆ ಗೌಡರ ಭಯ. ಅತ್ತು, ಕರೆದು ಹೇಗೊ ಆತ ಗದ್ದೆಯ ಬಳಿ ಬಂದು ಕೂಣೆಯನ್ನೆತ್ತುತ್ತಾನೆ. ಕೂಣೆಯ ತುಂಬಾ ಮೀನುಗಳು ತುಂಬಿ ಹೋಗಿರುತ್ತವೆ. ಮೀನು ತಿನ್ನಲೆಂದು ಬಂದು ಅದರೊಳಗಿದ್ದ ಕೃಷ್ಣಸರ್ಪ ಸುಬ್ಬನನ್ನು ಕಚ್ಚುತ್ತದೆ. ಸುಬ್ಬು ಚೀರಿ ವಿಷವೇರಿ ಕೆಳಗೆ ಬೀಳುತ್ತಾನೆ. ಮಳೆ ಗಾಳಿ ಕಡಿಮೆಯಾಗಿ, ಬೆಳಗಾದ ಮೇಲೆ ಗೌಡರು ಸುಬ್ಬ ಬಾರದಿದ್ದನ್ನು ನೋಡಿ "ಅವನು ಸಿಕ್ಕಲಿ, ಎಲುಬು ಮುರಿಯುತ್ತೇನೆ!" ಎಂದು ಗರ್ಜಿಸುತ್ತಾ ಕೂಣಿ ಸಮೀಪ ಬಂದು, ಸತ್ತು ಹೆಣವಾಗಿ ನಿಮಿರಿ ನಿಂತಿದ್ದ ಸುಬ್ಬನನ್ನು ಕಂಡು, ಬಹಳ ವ್ಯಸನಪಟ್ಟುಕೊಂಡು, "ಅಂತೂ ಮುನ್ನೂರು ರೂಪಾಯಿ ಮನೆಗೆ ಬಂತು" ಎಂದು ನಿಟ್ಟುಸಿರು ಬಿಡುತ್ತಾರೆ ಎಂಬಲ್ಲಿಗೆ ಕಥೆ ನಿಲ್ಲುತ್ತದೆ. ಸುಬ್ಬುವಿನ ಚಿತ್ರ ಓದುಗರ ಮನಸ್ಸನ್ನು ಸೂರೆಗೊಳ್ಳುತ್ತದೆ. ಆದರೆ ಗೌಡರು ಸುಬ್ಬನ ಸಾವಿನ ಬಗ್ಗೆ ನಿಡುಸುಯ್ದ ಅವನ ತಂದೆಗೆ ತಾವು ಕೊಟ್ಟ ಮುನ್ನೂರು ರೂಪಾಯಿ ವ್ಯರ್ಥವಾಯಿತಲ್ಲ ಎಂದು ಪರಿತಪಿಸುತ್ತಾರೆ. ಮೀನು ಸಿಕ್ಕದೆ ಹೋದುದರ ಬಗ್ಗೆ ಅವರಿಗೆ ವಿಷಾದವಿದೆ. ಗೌಡರ ಪಾತ್ರ ಸಮಾಜದ ನಿಷ್ಕರುಣೆಯ, ಹೃದಯ ಹೀನ



ಶ್ರೀಮಂತರ, ಶೋಷಕರ ಪ್ರತೀಕವಾಗಿದೆ. ಒಡೆಯನ ಆಸೆ ಕ್ರೌರ್ಯಕ್ಕಾಗಿ ಪ್ರಾಣತೆತ್ತ ಮುಗ್ಧ ಸುಬ್ಬು 'ಸಾಲದ ಮಗು'ವಾಗಿಯೇ ಸಾಯುತ್ತಾನೆ. ಗೌಡರ ವ್ಯಕ್ತಿತ್ವದ ಎಲ್ಲ ಮುಖಗಳನ್ನು ಕುವೆಂಪುರವರು ಮುಕ್ತವಾಗಿ ಬಿಚ್ಚಿಟ್ಟಿರುವುದು ಈ ಕಥೆಯ ವೈಶಿಷ್ಟ್ಯವಾಗಿದೆ. ಕುವೆಂಪು ಅವರ ಸಾಮಾಜಿಕ ಕಳಕಳಿ ಮತ್ತು ಕಲಾಪ್ರಜ್ಞೆಗೆ ಈ ಕಥನ ಸಾಕ್ಷಿಯಾಗಿದೆ.

ನಾಲ್ಕು ಜನರ ವೀರಗಾಸೆ ನೃತ್ಯದ ಮೂಲಕ ಆರಂಭವಾಗುವ ನಾಟಕ ಮಲೆನಾಡಿನ ವರ್ಣನೆಯಲ್ಲಿ ಗುಡುಗು, ಸಿಡಿಲು, ಮಿಂಚುಗಳೊಂದಿಗೆ ಸುರಿಯುವ ಮಳೆಯ ಆರ್ಭಟ, ಅಲ್ಲಿಯ ಬೆಟ್ಟ–ಗುಡ್ಡ, ಹಳ್ಳ–ಕೊಳ್ಳ, ಮರ–ಗಿಡಗಳ ವರ್ಣನೆಗಳು ಬೆಂಗಳೂರಿನ ಜನರಿಗೆ ಮಲೆನಾಡಿನ ಸೌಂದರ್ಯದ ಅನುಭವವನ್ನು ತಂದು, ಮನಸ್ಸನ್ನು ಪುಳಕಿತಗೊಳಿಸುತ್ತವೆ. ನಾಟಕದಲ್ಲಿ ಚಿತ್ರಿಸಿರುವ ಗೌಡನ ಕ್ರೌರ್ಯ ದೌರ್ಜನ್ಯಗಳು, ಸುಬ್ಬು ಮತ್ತು ಅವನ ತಂದೆಯ ಸಂಕಷ್ಟಗಳು, ಗುಲಾಮಗಿರಿಗೆ ಸಿಕ್ಕಿ ಅವರು ಪಡುವ ನೋವುಗಳು ಪ್ರೇಕ್ಷಕರ ಹೃದಯವನ್ನು ಕಲಕುತ್ತವೆ. ನಾಟಕದಲ್ಲಿ ಬರುವ ಸನ್ನಿವೇಶಗಳ ಸೃಷ್ಠಿ ಸಂಗೀತ, ನೃತ್ಯಗಳೆಲ್ಲವೂ ಪ್ರೇಕ್ಷಕರನ್ನು ಕುವೆಂಪುರವರ ಮಲೆನಾಡಿನ ಅದ್ಬುತ ಲೋಕಕ್ಕೆ ಆ ಕ್ಷಣದಲ್ಲಿ ಕೊಂಡೊಯ್ಯ ಬಲ್ಲಂತಹ ಚೈತನ್ಯತೆಯನ್ನು ಹೊಂದಿ, ಸಾಲದ ಮಗು ಜಾನಪದ ನಾಟಕ (**Salada Magu Folk Plays**) ಯಶಸ್ವಿ ನಾಟಕವಾಗಿ ಪ್ರೇಕ್ಷಕರನ್ನು ಮುಟ್ಟುತ್ತವೆ.

# ನಿದ್ರೆಯಲ್ಲಿದ್ದ ದೂರ್ವಾಸ ಮಹರ್ಷಿಗಳಿಗೆ ಶೃಂಗಾರ ಮಾಡಲು ಹೋದ ಕೈಕೆಯಿಗೆ ವರ ಮತ್ತು ಶಾಪ ಉಂಟಾದ ಕಥೆ

ದೇಶ ಸಂಚಾರ ಮಾಡುತ್ತಿದ್ದ ದೂರ್ವಾಸ ಮಹರ್ಷಿಗಳು, ಒಮ್ಮೆ ಕೇಕೇಯ ರಾಜ್ಯದ ಅರಮನೆಗೆ ಬಂದರು. ರಾಜ ಮಹರ್ಷಿಗಳನ್ನು ಸ್ವಾಗತಿಸಿ, ಅತಿಥಿ ಸತ್ಕಾರ ಮಾಡಿದನು. ಸಂತುಷ್ಟರಾದ ದೂರ್ವಾಸರು ರಾಜನ ಕ್ಷೇಮ ಸಮಾಚಾರವನ್ನು ವಿಚಾರಿಸಿ, ರಾಜ ನಾವು ಸ್ವಲ್ಪ ಕಾಲ ನಿನ್ನ ಅರಮನೆಯ ಅತಿಥಿಯಾಗಿ ಇರಲು ನಿರ್ಧರಿಸಿದ್ದೇವೆ ಎಂದಾಗ ಕೇಕೇಯ ರಾಜ ಸಂತೋಷದಿಂದ ಆಗಲಿ ಮಹರ್ಷಿಗಳೇ ತಾವು ಎಷ್ಟು ದಿನ ಬೇಕಾದರೂ ಇಲ್ಲಿ ಇರಬಹುದು ಎಂದು ಅವರಿಗೆ ಉಳಿದು ಕೊಳ್ಳುವ ವ್ಯವಸ್ಥೆ ಮಾಡಿ, ಅವರ ನಿತ್ಯಾನುಷ್ಠಾನಕ್ಕೆ ಸೇವೆ ಮಾಡಲು ಮಗಳು ಕೈಕೇಯಿಯನ್ನು ನೇಮಿಸುತ್ತಾನೆ. ರಾಜನ ಮಗಳು ಕೈಕೇಯಿ ಹಿರಿಯರಾದ ಋಷಿಮುನಿಗಳಿಗೆ, ನಿಶ್ಚಲ ಶ್ರದ್ಧೆಯಿಂದ ಸೇವೆ ಮಾಡುತ್ತಿದ್ದಳು. ಎಷ್ಟು ಎಂದರೆ ಸ್ವಲ್ಪ ದಿನಗಳಲ್ಲೇ ಕೈಕೇಯಿ ಮತ್ತು ಮಹರ್ಷಿಗಳಲ್ಲಿ ಅಜ್ಜ ಮೊಮ್ಮ ಗಳಂತೆ ಒಳ್ಳೆಯ ಸಲುಗೆ ಬೆಳೆಯಿತು. ಯಾವಾಗಲೂ ಕೈಕೇಯಿ ಅವರ ಸೇವೆ ಮಾಡುತ್ತಾ

ಅವರು ಕೇಳುವ ಮೊದಲೇ ಎಲ್ಲವನ್ನು ಅವರಿಗೆ ಒದಗಿಸುತ್ತ ಅವರು ಹೇಳುವ ಪುರಾಣ ಕಥೆ, ದೇವರನಾಮಗಳನ್ನು ಕೇಳುತ್ತಾ ಕಾಲ ಕಳೆಯುತ್ತಿದ್ದಳು.

ಒಂದು ದಿನ ಮಧ್ಯಾಹ್ನ ಋಷಿಗಳು ಭೋಜನ ಸ್ವೀಕರಿಸಿ ವಿಶ್ರಾಂತಿಯಲ್ಲಿ ನಿದ್ರೆಗೆ ಜಾರಿದರು. ಆಗ ಅಲ್ಲಿಗೆ ಬಂದ ಕೈಕೇಯಿ ಕಥೆ ಕೇಳಬೇಕೆಂದು ಅವರನ್ನು ಎಬ್ಬಿಸಲು ಪ್ರಯತ್ನಿಸಿದಳು. ಆದರೆ ಋಷಿಗಳು ಮೈ ಮರೆತ ನಿದ್ರೆಯಲ್ಲಿದ್ದು ಎಷ್ಟು ಕೂಗಿದರು ಎಚ್ಚರವಾಗಲಿಲ್ಲ. ಆಗ ಕೈಕೇಯಿಗೆ ತುಂಟ ಆಲೋಚನೆ ಬಂದು. ಅಜ್ಜ ಹೇಗಿದ್ದರೂ ಗಾಡ ನಿದ್ರೆಯಲ್ಲಿದ್ದಾರೆ. ಅವರಿಗೆ ಸ್ವಲ್ಪ ಕೀಟಲೆ ಮಾಡಬೇಕೆನಿಸಿ,ತನ್ನ ಕೋಣೆಗೆ ಹೋಗಿ ತನ್ನ ಅಲಂಕಾರದ ಸಾಮಗ್ರಿಗಳನ್ನು ತಂದು ಋಷಿಮುನಿಗಳಿಗೆ

ಅದರಲ್ಲಿದ್ದ ಸೌಂದರ್ಯ ಸಾಮಾಗ್ರಿ ಚೂರ್ಣವನ್ನು ಮಹರ್ಷಿಗಳ ಮುಖಕ್ಕೆ ಬಳಿದಳು. ಹಣೆಗೆ ದೊಡ್ಡದಾಗಿ ಕುಂಕುಮ ಇಟ್ಟು, ಕಣ್ಣಿಗೆ ಕಾಡಿಗೆ ಹಚ್ಚಿ, ತುಟಿಗೆ ತುಟಿ ರಂಗು, ಕೆನ್ನೆಗೆ ಮಿಂಚು ಹಾಕಿ ಮೇಲೆ ದೃಷ್ಟಿ ಬೊಟ್ಟು ಇಟ್ಟಳು. ಇಷ್ಟೇ ಅಲ್ಲದೆ ಅವರು ಎದ್ದ ಕೂಡಲೇ ಅವರ ಅಲಂಕಾರವನ್ನು ನೋಡಿಕೊಳ್ಳಲಿ ಎಂದು ಅವರ ಮುಂದೆ ಒಂದು ಕನ್ನಡಿಯನ್ನು ತಂದಿಟ್ಟು ತಾನು ಬಾಗಿಲು ಮರೆಯಲಿ ನಿಂತು ಮಹರ್ಷಿಗಳು ಏಳುವುದನ್ನು ನೋಡುತ್ತಾ ಕಾಯುತ್ತಿದ್ದಳು. ಸ್ವಲ್ಪ ಸಮಯಕ್ಕೆಋಷಿಗಳು ಎದ್ದು ಎದುರಿಗಿದ್ದ ಕನ್ನಡಿಯಲ್ಲಿ ತಮ್ಮ ಮುಖವನ್ನು ನೋಡಿಕೊಂಡ ಅವರಿಗೆ ಆಶ್ಚರ್ಯವಾಯಿತು ಇದೇನಿದು ನನ್ನ ಮುಖ ಹೀಗೇಕಾಗಿದೆ ಎಂದು

ಯೋಚಿಸುತ್ತಿದ್ದ ಅವರನ್ನು ನೋಡಿ ಬಾಗಿಲ ಮರೆಯಲ್ಲಿ ಅಡಗಿದ್ದ, ಕೈಕೇಯಿ ಜೋರಾಗಿ ನಗಲು ಶುರು ಮಾಡಿದಳು.

ಮೊದಲೇ ಕೋಪಿಷ್ಟರು ಎಂದು ಹೆಸರು ಪಡೆದ ದೂರ್ವಾಸರು,



ಕೈಕೇಯಿ ಪುಟ್ಟ ಬಾಲಕಿ ಎಂಬುದನ್ನು ಮರೆತು, ಹಿಂದೂ ಮುಂದು ಯೋಚಿಸದೆ ಕೋಪಗೊಂಡು ಅವಳಿಗೆ ಶಾಪ ಕೊಟ್ಟರು. ನನ್ನ ಮುಖಕ್ಕೆ ಹೀಗೆ ಮಸಿ ಬಳಿದ ನಿನಗೆ ಮುಂದೆ ಒಂದು ದಿನ ನಿನ್ನ ಮುಖಕ್ಕೂ ಹೀಗೆ ಮಸಿ ಬಳಿಯುವಂತಾಗಲಿ, ಅದು ಎಂದೆಂದೂ ಅಳಿಸುವಂಥ ಮಸಿಯಾಗಿರದೇ ನಿನ್ನನ್ನು ನೋಡಿದ ಜನರು ಅಸಹ್ಯ ಪಡುವಂತಾಗಬೇಕು ಅಂತ ಮಸಿ ನಿನ್ನ ಮುಖಕ್ಕೆ ಬಳಿಯಲಿ ಎಂದು ಶಾಪ ನೀಡಿ, ಇನ್ನು ನಿನ್ನ ಮನೆಯಲ್ಲಿ ಉಳಿಯುವುದಿಲ್ಲ ಎಂದು ಅಲ್ಲಿಂದ ಸರಸರನೆ ಹೊರಟೇಬಿಟ್ಟರು.

ಕೋಪದಿಂದ ಹೊರಟ ಭರದಲ್ಲಿ ದೂರ್ವಾಸರು ತಮ್ಮ ನಿತ್ಯ ಪೂಜೆಯ ಸಾಲಿಗ್ರಾಮ ಪೆಟ್ಟಿಗೆಯನ್ನು ಅಲ್ಲೇ ಬಿಟ್ಟು ಹೊರಟಿದ್ದರು. ಅದನ್ನು ಕಂಡ ಕೈಕೇಯಿ ಆ ಪೆಟ್ಟಿಗೆಯನ್ನು ಹಿಡಿದು, ಅವರ ಹಿಂದೆಯೇ ಓಡಿ ಬಂದು, ಅಜ್ಜಾ ನಿಮ್ಮ ಪೆಟ್ಟಿಗೆ ಯನ್ನು ಬಿಟ್ಟು ಬಂದಿದ್ದೀರಿ ತೆಗೆದುಕೊಳ್ಳಿ ಎಂದು ಅವರ ಕೈಗೆ ಕೊಟ್ಟಳು. ದೂರ್ವಾಸರಿಗೆ ಆ ಹುಡುಗಿಯನ್ನು ನೋಡಿ ಅಯ್ಯೋ ಅನ್ನಿಸಿತು. ಛೆ ಪಾಪದ ಮಗು, ನಾನು ಶಾಪ ಕೊಟ್ಟರೂ, ಅರಿವಿಲ್ಲದೆ ಬಂದು ಗೌರವದಿಂದ ನನ್ನ ಪೆಟ್ಟಿಗೆ ಯನ್ನು ಹಿಂತಿರುಗಿಸಿದ್ದಾಳೆ ಎಂದು ಅಭಿಮಾನ ಮೂಡಿ, ಆಕೆ ತಲೆ ಮೇಲೆ ಕೈ ಇಟ್ಟು ಮತ್ತೆ ಹೇಳಿದರು, ಮಗು ಯಾವ ಕೈಯಿಂದ ನೀನು ನನ್ನ ಪೆಟ್ಟಿಗೆಯನ್ನು ತಂದು ಕೊಟ್ಟೆಯೋ ಈ ನಿನ್ನ ಕೈ "ವಜ್ರಕಾಯದಂತೆ" ಕಠಿಣವಾಗಲಿ (ಅಭೇದ್ಯವಾಗಲಿ) ಎಂದು ವರವನ್ನು ಕೊಟ್ಟರು.

ಕಾಲ ಕಳೆಯಿತು ಕೈಕೇಯಿ ಯುವತಿಯಾಗಿ, ಅಯೋಧ್ಯಾಪತಿ ದಶರಥನನ್ನು ವಿವಾಹವಾದಳು. ಹೀಗೆ ಒಮ್ಮೆ ದಶರಥ ಹೊರ ರಾಜ್ಯದ ಮೇಲೆ ಯುದ್ಧಕ್ಕೆಂದು ಹೊರಟಾಗ ಯುದ್ಧ ತೋರಿಸಲು ಮುದ್ದಿನ ರಾಣಿ ಕೈಕೇಯಿಯನ್ನು ಜೊತೆಯಲ್ಲಿ ಕರೆದೊಯ್ದನು. ಯುದ್ಧ ನಡೆಯುತ್ತಿದ್ದಾಗ ಮಧ್ಯದಲ್ಲಿ ದಶರಥನ ಚಕ್ರದ ಕಡಾಣಿ ಆಚೆ ಬಂದು ಇನ್ನೇನು ಸ್ವಲ್ಪ ಹೊತ್ತಿಗೆ ರಥದ ಚಕ್ರ ಹೊರಗೆ ಬರುತ್ತಿತ್ತು. ಚಕ್ರ ಆಚೆ ಬರುತ್ತಿರುವುದನ್ನು ಕಂಡ ಕೈಕೇಯಿ ನೋಡಿದಳು, ಎಲ್ಲಿ ಚಕ್ರ ಆಚೆ ಬಂದರೆ ದಶರಥ ಕೆಳಗೆ ಬೀಳುತ್ತಾನೋ ಎಂದು ಯೋಚಿಸಿ, ಕಡಾಣೀಯ ಜಾಗದಲ್ಲಿ ತನ್ನ ಕೈಯನ್ನು ಇಟ್ಟುಬಿಟ್ಟಳು. ರಥ ವೇಗವಾಗಿ ಓಡುತ್ತಿದೆ. ಮುನಿಗಳು ಕೊಟ್ಟ ಶಾಪದಿಂದ ಕೇಯಿಯ ಕೈಗೆ ಯಾವು ಹಾನಿಯೂ ಆಗಲಿಲ್ಲ. ಯುದ್ಧವೆಲ್ಲ ಮುಗಿದ ಮೇಲೆ ಕೈಕೇಯಿ ಚಕ್ರದ ಕಡಾಣಿ ಇದ್ದ ರಂದ್ರದಲ್ಲಿ ಕೈ ಇಟ್ಟಿದ್ದನ್ನು ಕಂಡು ದಶರಥ ದಂಗಾಗಿ ಹೋದ. ಕೈಕೆಯಿ ಏಕೆ ಅಲ್ಲಿ ಕೈ ಇಟ್ಟಿರುವೆ? ಎಂದು ಕೇಳಿದಾಗ, ಇಲ್ಲಿದ್ದ ಕಡಾಣಿ ಆಚೆ ಬಂದು ಚಕ್ರ ಹೊರಗೆ ಬರುತ್ತಿತ್ತು ಹಾಗೆ ಹೊರಗೆ ಬಂದರೆ, ರಥ ಬೀಳುತ್ತಿತ್ತು ಅದಕ್ಕೆ ಅಲ್ಲಿ ನನ್ನ ಕೈ ಇಟ್ಟು ಚಕ್ರ ಆಚೆ ಬರದಂತೆ ತಡೆದೆ ಎಂದಳು.

ಇದರಿಂದ ಸಂತಸಗೊಂಡ ದಶರಥ ಕೈಕೇಯಿ ನಿನ್ನ ಧೈರ್ಯ ಹಾಗೂ ಸಾಹಸದಿಂದ ಇಂದು ನನ್ನ ಪ್ರಾಣ ರಕ್ಷಣೆ ಮಾಡಿರುವೆ ಅದಕ್ಕಾಗಿ ನಿನಗೆ ಎರಡು ವರಗಳನ್ನು ಕೊಡುತ್ತೇನೆ ನೀನು ಯಾವಾಗ ಬೇಕಾದರೂ ಈ ವರಗಳನ್ನು ಕೇಳಬಹುದು ಎಂದನು.

**ಕೈಕೆಯಿಯ ಕೃಪೆ ಇಲ್ಲದಿದ್ದರೆ:–** ಮುಂದೆ ದಶರಥ ತನ್ನ ಉತ್ತರಾಧಿಕಾರಿಯಾಗಿ ರಾಮನಿಗೆ ಪಟ್ಟಾಭಿಷೇಕ ಮಾಡಲು ತೀರ್ಮಾನಿಸಿ ತಯಾರಿ ನಡೆಸಿದ. ಈ ವಿಷಯ

ಕೈ ಕೆಯದಾಸಿ ಮಂಥರೆಗೆ ತಿಳಿದು, ಕೈಕೆಯಿಗೆ ಇನ್ನು ಮುಂದೆ ನೀನು ರಾಜಮಾತೆ ಕೌಸಲ್ಯೆ ಹೇಳಿದಂತೆ ಕೇಳಬೇಕಾಗುತ್ತದೆ. ಈಗಲೇ ಎಚ್ಚೆತ್ತು ಕೊಂಡು ನಿನ್ನ ಮಗ ಭರತನಿಗೆ ಪಟ್ಟಾಭಿಷೇಕ ಕಟ್ಟಿಸಿ ರಾಮನನ್ನು 14 ವರ್ಷ ಕಾಡಿಗೆ ಕಳಿಸು. ಹೀಗೆ ಮಾಡಲು ನೀನು ದಶರಥನಲ್ಲಿ ಅವರೇ ಕೊಟ್ಟ ಎರಡು ವರಗಳನ್ನು ಈಗ ಬಳಸು

ಇಲ್ಲದಿದ್ದರೆ ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ ಎಂದಾಗುತ್ತದೆ. ಬೇಗ ಮಾಡು ಎಂದು ಸಾಕಷ್ಟು ಸಮಯ ಪುಸಲಾಯಿಸಿ ಕೈಕೇಯಿ ಮನಸ್ಸನ್ನು ಕೆಡಿಸಿದ್ದಳು. ಅದರಂತೆ ಎಲ್ಲಾ ನಡೆದು ಪಿತೃವಾಕ್ಯ ಪರಿಪಾಲನೆಗಾಗಿ, ತಂದೆಯನ್ನು ಧರ್ಮ ಮಾರ್ಗದಲ್ಲಿ ನಡೆಸಲು, ರಾಮ ಪತ್ನಿ ಸೀತೆ ಹಾಗೂ ಸಹೋದರ ಲಕ್ಷ್ಮಣನೊಂದಿಗೆ ನಾರು ಮಡಿ ಉಟ್ಟು, 14 ವರ್ಷ ವನವಾಸಕ್ಕೆ ಹೊರಟನು.

ಒಂದಷ್ಟು ಕಾಲ ಕಳೆಯಿತು ಮನೆ ವಾಸ್ತುದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಿದ ರು. ಲಕ್ಷ್ಮಣನು ಒಮ್ಮೆ ಬೇಸರದಿಂದ, ರಾಮನಲ್ಲಿ ಹೇಳಿದ ಭ್ರಾತ ಇದೆಲ್ಲ ಕೈಕೇಯಿ ಯಿಂದಲೇ ಆಗಿದ್ದು, ಇದಕ್ಕೆಲ್ಲ ಮೂಲ ಕಾರಣ ಆ ದುಷ್ಟ ಕೈಕೆಯಿ ಎಂದು ಮಾತು ಮುಗಿಸುವ ಮುನ್ನವೇ, ರಾಮ ಅವನ ಮಾತನ್ನು ಅರ್ಧಕ್ಕೆ ತಡೆದು ಲಕ್ಷ್ಮಣ ನೀನು ಭರತನನ್ನು ನಿಂದಿಸಿದರೂ ನಾನು ಸುಮ್ಮನಿದ್ದೆ. ಆದರೆ ಕೈಕೇಯಿ ನಿಂದನೆ ಮಾತ್ರ ನನಗೆ ಸಹಿಸಲು ಆಗದು ಎಂದನು. ಇಂದು ನನ್ನ ಹೆಸರು ಜಗದ್ವಿಖ್ಯಾತವಾಗಿದೆ

ಎಂದರೆ ಅದಕ್ಕೆ ಕೈಕೇಯಿ ಕಾರಣಳಾಗಿದ್ದಾಳೆ. ಒಂದೊಮ್ಮೆ ಕೈಕೇಯಿ ಹೀಗೆ ಮಾಡದಿದ್ದರೆ, ನನ್ನ ಸಾಮರ್ಥ್ಯ– ಸಾಹಸ ಯಾರಿಗೂ ತಿಳಿಯುತ್ತಿರಲಿಲ್ಲ. ಕೇವಲ ರಾಜನಾಗಷ್ಟೇ ಇರುತ್ತಿದ್ದೆ. ಋಷಿ ಮುನಿಗಳ ಸಂಪರ್ಕ, ರಾಕ್ಷಸರ ಸಂಹಾರ ಯಾವುದು ಆಗುತ್ತಿರಲಿಲ್ಲ. ಮುಖ್ಯವಾಗಿ ಲೋಕ ಜ್ಞಾನ ತಿಳಿಯುತ್ತಿರಲಿಲ್ಲ, ರಾಜ್ಯ ವಿಸ್ತಾರವೂ ಆಗುತ್ತಿರಲಿಲ್ಲ. ನನ್ನ ಜೀವನದಲ್ಲಿ ಇಷ್ಟೆಲ್ಲ ಸಂಗತಿಗಳು ಘಟಿಸಲು ಆ ಮಹಾತಾಯಿಯೇ ಕಾರಣಳಾಗಿದ್ದಾಳೆ. ಇಲ್ಲವಾದರೆ ಕೆಳಗಿನ ಕಾಡು ರಾಕ್ಷಸರದು, ಕಿಷ್ಕಿಂದೆ ರಾಜಧಾನಿ ಇನ್ನೊಂದು ಕಡೆಗೆ, ವಿರಾದ ಮತ್ತೊಂದು ಕಡೆ ಖರದೂಷಣರು ರಾವಣನ ಲಂಕೆ, ಹೀಗೆ ಎಲ್ಲವನ್ನು ಜಯಸಿದೆವು. ಈಗ ಸುಗ್ರೀವ– ವಿಭೀಷಣ ನನ್ನವರು. ಇಷ್ಟೇ ಅಲ್ಲ ನಾನು ಅಯೋಧ್ಯೆಗೆ ಮರಳುವ ತನಕ, ಅದರ ರಕ್ಷಣೆಯ ಜವಾಬ್ದಾರಿಯನ್ನು ಕೈಕೇಯಿ ಮಗ ಭರತ ಹೊತ್ತಿದ್ದಾನೆ. ಮೇಲ್ನೋಟಕ್ಕೆ ಕೈಕೇಯಿ ಈ ಕಷ್ಟವನ್ನೇ ಕೊಟ್ಟಿದ್ದಾಳೆ, ಎನಿಸಿದರೂ ಆಕೆಯಿಂದ ನನಗೆ ಸಾಕಷ್ಟು ಉಪಕಾರ ವಾಗಿದೆ. ಇದರಿಂದ ಲೋಕ ಕಲ್ಯಾಣವಾಯಿತು ಇದಕ್ಕಿಂತ ಇನ್ನೇನು ಬೇಕು ಲಕ್ಷ್ಮಣ ಎಂದು ರಾಮ ಹೇಳಿದ. ಯಾರಿಗೂ ಬೇಡದ ವಸ್ತುಗಳನ್ನು ಶಿವನು ಆಪ್ತತೆಯಿಂದ ತನ್ನ ಹತ್ತಿರ ಸೇರಿಸಿಕೊಳ್ಳುವಂತೆ, ಕೆಟ್ಟದ್ದನ್ನು ಒಳ್ಳೆಯದನ್ನಾಗಿ ಪರಿವರ್ತಿಸುವ ಗುಣ ರಾಮನದು.

"ಲೋಕಾಭಿರಾಮಂ ರಣರಂಗಧೀರಂ!
ರಾಜೀವನೇತ್ರಂ ರಘುವಂಶನಾಥಂ!!
ಕಾರುಣ್ಯರೂಪಂ ಕರುಣಾಕರಂ ತಂ!
ಶ್ರೀರಾಮಚಂದ್ರ ಶರಣಂ ಪ್ರಪದ್ಯೇ!!

ಬರಹ:– ಆಶಾ ನಾಗಭೂಷಣ.

# ರಾಮನಗರ ಸುದ್ದಿ ಕಾರ್ನರ್

## ಸುಗ್ಗನಹಳ್ಳಿ ಸಹಕಾರಿ ಸಂಘಕ್ಕೆ ನರಸಿಂಹಯ್ಯ ಅಧ್ಯಕ್ಷ

ರಾಮನಗರ: ತಾಲ್ಲೂಕಿನ ಸುಗ್ಗನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಗುರುವಾರ ನಡೆದ ಅಧ್ಯಕ್ಷ ಚುನಾವಣೆಯಲ್ಲಿ ಬಿ.ನರಸಿಂಹಯ್ಯ ಸಂಘದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು.

ಕೃಷ್ಣಮೂರ್ತಿ ಅವರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಿತು. ಚುನಾವಣಾಧಿಕಾರಿ ಮಂಜುನಾಥ್ ಕರ್ತವ್ಯ ನಿರ್ವಹಿಸಿದರು. ಸಹ ಚುನಾವಣಾಧಿಕಾರಿಯಾಗಿ ಸಂಘದ ಮುಖ್ಯ ಕಾರ್ಯನಿರ್ವಾಹಕ ಪ್ರಕಾಶ್ ಕಾರ್ಯನಿರ್ವಹಿಸಿದರು. ಒಟ್ಟು 12 ಜನ ಸದಸ್ಯರಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಿ.ನರಸಿಂಹಯ್ಯ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಇವರು ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಘೋಷಿಸಿದರು. ಬಳಿಕ ನೂತನ ಅಧ್ಯಕ್ಷರನ್ನು ಸಂಘದ ಆವರಣದಲ್ಲಿ ಮುಖಂಡರು ಸಂಘದ ನಿರ್ದೇಶಕರು ಅಭಿನಂದಿಸಿದರು.



ಈ ವೇಳೆ ನೂತನ ಅಧ್ಯಕ್ಷ ಬಿ.ನರಸಿಂಹಯ್ಯ ಅಭಿನಂದನೆ ಸ್ವೀಕರಿಸಿ ಮಾತನಾಡಿ, ಸಂಘ ಸ್ಥಳೀಯ ರೈತರ ಏಳಿಗೆಗಾಗಿ ದುಡಿಯುತ್ತಿದೆ. ರೈತರಿಗೆ ಬೆಳೆಸಾಲ, ಸ್ತ್ರೀಶಕ್ತಿ ಸಾಲ ಸೇರಿದಂತೆ ಸಂಘದಿಂದ ದೊರೆಯುವ ಸವಲತ್ತುಗಳನ್ನು ಕಾಲಾಕಾಲಕ್ಕೆ ತಲುಪಿಸಲಾಗುತ್ತಿದೆ. ರೈತರಿಗೆ ಸುಲಭವಾಗಿ ನೆರವಾಗುವ ಕ್ಷೇತ್ರ ಗ್ರಾಮೀಣ ಪ್ರದೇಶದ ಕೃಷಿ ಪತ್ತಿನ ಸಹಕಾರ ಸಂಘಗಳು. ನೂತನ ಆಡಳಿತ ಮಂಡಳಿಯ ಸಹಕಾರದಿಂದ ಮತ್ತಷ್ಟು ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ದು ಸಂಘವನ್ನು ಮತ್ತಷ್ಟು ಜನಸ್ನೇಹಿಯಾಗಿ ಮಾಡಲಾಗುತ್ತದೆ ಎಂದು ತಿಳಿಸಿದರು.ಚುನಾವಣೆ ಪ್ರಕ್ರಿಯೆಯಲ್ಲಿ ಸಂಘದ ಉಪಾಧ್ಯಕ್ಷೆ ರಾಮಕ್ಕ, ನಿರ್ದೇಶಕರುಗಳಾದ ಕೆ.ಚಂದ್ರಯ್ಯ, ಕೃಷ್ಣಮೂರ್ತಿ, ಆಂಜನಪ್ಪ, ಜಯಮ್ಮ, ಹೆಚ್. ರವಿ, ವೆಂಕಟೇಶ್, ಹೊನ್ನಯ್ಯ, ಕೃಷ್ಣಪ್ಪ, ವೆಂಕಟಯ್ಯ, ಸಿದ್ದಲಿಂಗಯ್ಯ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಸಬ್ಬಕೆರೆ ಶಿವಲಿಂಗಪ್ಪ, ಗ್ರಾಪಂ ಮಾಜಿ ಅಧ್ಯಕ್ಷ ಎಸ್.ಆರ್. ರಾಮಕೃಷ್ಣಯ್ಯ, ಮುಖಂಡರುಗಳಾದ ಹೋಟೆಲ್ ಉಮೇಶ್, ಶಾಂತಣ್ಣ, ಮಹದೇವಯ್ಯ, ಶಿವರಾಮು, ಶಿವಮೂರ್ತಿ, ಬಾಬು, ಗುರುಲಿಂಗಯ್ಯ, ಗಂಗಾಧರಚಾರ್, ಬೋರೇಗೌಡ, ಲೋಕೇಶ್, ಬೈರಪ್ಪ, ಗಂಗಾಧರ್, ಬಸವರಾಜು, ಗೋಪಾಲಕೃಷ್ಣ, ಚಿಕ್ಕಣ್ಣಾಚಾರ್, ಕುಮಾರಸ್ವಾಮಿ ಸಂಘದ ಸಿಇಓ ಪ್ರಕಾಶ್, ಸಿಬ್ಬಂದಿಗಳಾದ ಸಿದ್ದಯ್ಯ, ಚೈತ್ರ, ಲಕ್ಕಪ್ಪ ಮತ್ತಿತರರು ಇದ್ದರು.

## ಶಿಕ್ಷಣದಿಂದ ಜೀತ ಪದ್ಧತಿ ನಿರ್ಮೂಲನೆ ಸಾಧ್ಯ: ನ್ಯಾ. ಅಣ್ಣಯ್ಯ

ರಾಮನಗರ, ಪ್ರತಿಯೊಬ್ಬರೂ ಶಿಕ್ಷಣ ಪಡೆದು, ವಿದ್ಯಾವಂತರಾಗಿ ಉದ್ಯೋಗ ಪಡೆಯುವ ಮೂಲಕ ಜೀತ ಪದ್ಧತಿ ನಿರ್ಮೂಲನೆ ಮಾಡಬಹುದಾಗಿದೆ ಎಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾ. ಎಂ.ಎಚ್. ಅಣ್ಣಯ್ಯನವರ ಅವರು ತಿಳಿಸಿದರು.



ಅವರು ನಗರದ ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಜಿಲ್ಲಾ ಪೊಲೀಸ್ ಇಲಾಖೆ, ಸರ್ಕಾರಿ ಕಾನೂನು ಕಾಲೇಜು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮುಕ್ತಿ ಒಕ್ಕೂಟ ಕರ್ನಾಟಕ, ಶಾಂತ ಜೀವಜ್ಯೋತಿ ಹಾಗೂ ಇತರೆ ಇಲಾಖೆಗಳ ಸಹಯೋಗದೊಂದಿಗೆ ಜೀತ ಪದ್ಧತಿ ನಿರ್ಮೂಲನೆ ಕುರಿತು ಆಯೋಜಿಸಲಾಗಿದ್ದ ಜಾಥಾಗೆ ಚಾಲನೆ ನೀಡಿ ಮಾತನಾಡಿದರು.

ಬಡತನ, ಅನಕ್ಷರತೆ, ನಿರುದ್ಯೋಗ ಜೀತಪದ್ಧತಿಗೆ ಮೂಲ ಕಾರಣವಾಗಿದೆ, ಶಿಕ್ಷಣದಿಂದ ಜಾಗೃತರಾಗಿ ಪ್ರತಿಯೊಬ್ಬರು ಸಮಾಜದಲ್ಲಿನ ಕಳಂಕಿತ ಪದ್ಧತಿಗಳ ವಿರುದ್ಧ ಹೋರಾಡಲು ಈ ಜಾಥಾ ಸಹಕಾರಿಯಾಗಲಿದೆ ಎಂದು ಹೇಳಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಕೆ. ಕೆಂಪಯ್ಯ ಅವರು ಮಾತನಾಡಿ, ಯಾವ ಮನುಷ್ಯ ಯಾರ ಮೇಲೂ ಅವಲಂಬಿತನಾಗದೇ ತನ್ನ ಸ್ವಂತ ಯೋಚನೆಗಳಿಂದ ಬದುಕುತ್ತಾನೋ ಅಲ್ಲಿ ಉತ್ತಮವಾದ ಸಮಾಜ ನಿರ್ಮಾಣವಾಗುತ್ತದೆ ಹಾಗೂ ಉತ್ತಮ ಜೀವನ ನಡೆಸಲು ಸಾಧ್ಯವಾಗುತ್ತದೆ. ಜೀತಪದ್ಧತಿಗೆ ತಿಳುವಳಿಕೆಯಿಲ್ಲದವರು ಬಲಿಯಾಗುತ್ತಾರೆ ಎಂದರು.

ಈ ಸಂದರ್ಭದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಸವಿತ ಪಿ.ಆರ್., ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷರಾದ ಜಯರಾಮ್, ಕಾರ್ಯದರ್ಶಿ ಚಂದ್ರಶೇಖರ್, ಎಸ್.ಟಿ.ಎಫ್.ಸಿ ಮತ್ತು ಜಾಗೃತಿ ಸಮಿತಿ ಸದಸ್ಯರಾದ ಷಣ್ಮುಗ ಸುಂದರಂ,, ಮುಕ್ತಿ ಒಕ್ಕೂಟದ ರಾಜೇಂದ್ರ, ಶಾಂತ ಜೀವ ಜ್ಯೋತಿಯ ರಮೇಶ್, ಉದ್ಯೋನ್ಮುಖ ಸಂಸ್ಥೆಯ ಮಂಜೇಶ್ ಕುಮಾರ್ ಸೇರಿದಂತೆ ವಕೀಲರು ಹಾಗೂ ಇತರರು ಉಪಸ್ಥಿತರಿದ್ದರು

## ತುಮಕೂರು ಜಿಲ್ಲೆಯಲ್ಲಿ ಪ್ರಪ್ರಥಮ ಬಾರಿಗೆ ಷಟಲ್ ಬ್ಯಾಡ್ಮಿಂಟನ್ ಲೀಗ್

ತುಮಕೂರು ಜಿಲ್ಲೆಯಲ್ಲಿ ಪ್ರಪ್ರಥಮ ಬಾರಿಗೆ ಷಟಲ್ ಬ್ಯಾಡ್ಮಿಂಟನ್ ಲೀಗ್ ಪಂದ್ಯಗಳನ್ನು ಇದೇ ಮಾರ್ಚ್ 22, 2026ರಂದು ಖಿಜಚಿಟ ಖಟಛ್ಘುಠಟುಛಿ ಮತ್ತು ವಿಂಟೇಜ್ ಇವೆಂಟ್ಸ್ ವತಿಯಿಂದ ನಡೆಸಲಾಗುತ್ತದೆ.




ಈ ಲೀಗ್‌ನಲ್ಲಿ 8 ತಂಡಗಳು ಮತ್ತು ಪ್ರತಿ ತಂಡಕ್ಕೆ 9 ಆಟಗಾರರು ಭಾಗವಹಿಸುತ್ತಾರೆ. ಈ ಲೀಗ್‌ನಲ್ಲಿ ಭಾಗವಹಿಸಲು ಇಚ್ಛಪಡುವ ಆಟಗಾರರು ಕೆಳಗಿ ನೀಡಿರುವ ಲಿಂಕ್ ಮೂಲಕ ವಯಸ್ಸಿನ ವಯೋಮಿತಿಗೆ ಅನುಗುಣವಾಗಿ ನೊಂದಣಿ ಮಾಡಿಸಿಕೊಳ್ಳಬಹುದು. ಮಾರ್ಚ್ 2 ನೊಂದಣಿ ಮಾಡಲು ಕೊನೆಯ ದಿನವಾಗಿರುತ್ತದೆ. ಆಟಗಾರರ ಆಯ್ಕೆಯನ್ನು ಐಪಿಎಲ್ ಮಾದರಿಯ ಹರಾಜು ಪ್ರಕ್ರಿಯೆಯಂತೆ ನಡೆಸಲಾಗುತ್ತದೆ. ಹರಾಜು ಪ್ರಕ್ರಿಯೆಯನ್ನು ಮಾರ್ಚ್ 7ರಂದು ತುಮಕೂರಿನ ಅರ್ಬನ್ ಸೆರಾರ್ಟ್‌ನಲ್ಲಿ ನಡೆಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :

ಸ್ವಾಮಿ : 9538384757

ಗೌತಮ್ : 9945914716

ನೊಂದಣಿ ಮಾಡಲು ಬಳಸುವ ಲಿಂಕ್ : https://forms.gle/hHhmm3E1KxJUb5pM9

## 26ನೇ ಇ–ಖಾತಾ ಆಂದೋಲನ: ಆಸ್ತಿ ಮಾಲೀಕರಿಗೆ ಇ–ಖಾತೆ ವಿತರಣೆ

ರಾಮನಗರ : ಕಂದಾಯ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಕ್ಕೆ ನಿಯೋಜಿಸಿರುವುದು ಹಾಗೂ ಸರ್ವರ್ ಸಮಸ್ಯೆಯಿಂದ ಆಸ್ತಿ ಮಾಲೀಕರಿಗೆ ಇ–ಆಸ್ತಿ ಸೃಜನೆಯಲ್ಲಿ ವಿಳಂಬವಾಗಿದೆ. ಈ ನಡುವೆ 150ಕ್ಕೂ ಅಧಿಕ ಇ–ಖಾತೆಗಳನ್ನು ವಿತರಿಸಲಾಗುತ್ತಿದೆ ಎಂದು ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ ಶಶಿ ಅವರು ತಿಳಿಸಿದರು.



ನಗರಸಭೆ ಸಭಾಂಗಣದಲ್ಲಿ ನಡೆದ 26ನೇ ಇ–ಖಾತಾ ಆಂದೋಲನದಲ್ಲಿ ಆಸ್ತಿ ಮಾಲೀಕರಿಗೆ ಇ–ಖಾತೆ ವಿತರಿಸಿ ಮಾತನಾಡಿದ ಅವರು, ಆಸ್ತಿ ಮಾಲೀಕರು ಖಾತೆ ಪಡೆಯಲು ಎಷ್ಟು ಆಸಕ್ತಿ ವಹಿಸುತ್ತೀರೋ ಅಷ್ಟೇ ನಗರ ಸ್ವಚ್ಛತೆಗೂ ಆದ್ಯತೆ ನೀಡಬೇಕು. ಎಲ್ಲೆಂದರಲ್ಲಿ ಕಸ ಎಸೆಯುವುದನ್ನು ಮಾಡಬಾರದು. ನಮ್ಮ ಮನೆಯ ಸುತ್ತಮುತ್ತ, ನಂತರ ನಮ್ಮ ರಸ್ತೆ, ನಮ್ಮ ಬಡಾವಣೆಯನ್ನು ಸ್ವಚ್ಛವಾಗಿಟ್ಟುಕೊಂಡರೆ, ನಗರ ತಾನಾಗಿಯೇ ಸ್ವಚ್ಛವಾಗಿರುತ್ತದೆ. ಸಿಬ್ಬಂದಿ ಕೊರತೆಯ ನಡುವೆಯೂ ನಗರಸಭೆ ಸಾಕಷ್ಟು ಪರಿಶ್ರಮ ಹಾಕುತ್ತಿದೆ. ಎಲ್ಲರೂ ತಪ್ಪದೆ ನಗರಸಭೆ ವಾಹನಗಳಿಗೆ ಕಸವನ್ನು ನೀಡಬೇಕು ಎಂದರು.

ಆಯುಕ್ತರಾದ ಡಾ.ಜಯಣ್ಣ ಅವರು ಮಾತನಾಡಿ, ಡಿಸೆಂಬರ್‌ನಿಂದ ಈವರೆಗೆ ಈ–ಆಸ್ತಿ ತಂತ್ರಾಂಶ ಉನ್ನತೀಕರಣ ಮಾಡಲಾಗುತ್ತಿತ್ತು. ಈ ವೇಳೆ ತಾಂತ್ರಿಕ ಸಮಸ್ಯೆಯಿಂದ ನಿಗದಿತ ಅವಧಿಯೊಳಗೆ ಇ–ಖಾತೆ ವಿತರಿಸಲು ಸಾಧ್ಯವಾಗಿರಲಿಲ್ಲ. ಇತ್ತೀಚೆಗೆ ಅರ್ಜಿದಾರರ ಸಂಖ್ಯೆ ಹೆಚ್ಚಾಗುತ್ತಿದೆ. ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಲ್ಲಿಸಿದವರಲ್ಲಿ ಕೆಲವರ ಅರ್ಜಿ ಮಾತ್ರ ಮಾನ್ಯವಾಗುತ್ತಿದೆ. ದಾಖಲಾತಿ ಕೊರತೆ ಇರುವ ಅರ್ಜಿಗಳನ್ನು ತಿರಸ್ಕಾರ ಮಾಡಲಾಗುತ್ತಿದೆ. ಸರಿಯಾದ ದಾಖಲೆ ಮತ್ತು ನೈಜ ಮಾಹಿತಿಯನ್ನು ನೀಡಿದ್ದಲ್ಲಿ ಮಾತ್ರ ತಂತ್ರಾಂಶದ ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ ಎಂದು ತಿಳಿಸಿದರು.

ಯಾರ ಅರ್ಜಿಗಳು ತಿರಸ್ಕೃತವಾಗಿದೆಯೋ ಅಂತಹವರು ನಮ್ಮ ನಗರಸಭೆ ಕಚೇರಿಗೆ ಬಂದು ಕಂಪ್ಯೂಟರ್ ಮುಂದೆ ಕುಳಿತು ಇ–ಖಾತೆಗೆ ಬೇಕಾದ ಎಲ್ಲಾ ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕು. ಇದಕ್ಕೆ ನಮ್ಮ ಸಿಬ್ಬಂದಿಯವರು ಸಹಕರಿಸುತ್ತಾರೆ. ಯಾರೂ ಗಾಬರಿಯಾಗುವ ಅವಶ್ಯಕತೆ ಇಲ್ಲ. ಸೂಕ್ತದಾಖಲಾತಿಗಳನ್ನು ಉಳ್ಳವರಿಗೆ ಇ–ಖಾತೆ ಖಂಡಿತ ದೊರೆಯುತ್ತದೆ. ರಂಜಾನ್ ಉಪವಾಸ ಆರಂಭವಾಗಿರುವುದರಿಂದ ಇ–ಆಸ್ತಿಯ ಅನೇಕ ಮಾಲೀಕರು ಬಂದಿಲ್ಲ. ಅಂತಹವರು ಶನಿವಾರ ಕಂದಾಯ ಕಛೇರಿಗೆ ಬಂದು ಇ–ಖಾತೆ ಪಡೆದುಕೊಳ್ಳಬಹುದು ಎಂದರು.

ಕಾರ್ಯಕ್ರಮದಲ್ಲಿ ನಗರಸಭಾ ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ, ಆರ್.ಓ. ಕಿರಣ್, ವ್ಯವಸ್ಥಾಪಕಿ ರೇಖಾ, ಕಂದಾಯ ನಿರೀಕ್ಷಕ ಆರ್.ನಾಗರಾಜು, ಕಂದಾಯ ವಿಭಾಗದ ಸಿಬ್ಬಂದಿವರ್ಗ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಹುಂಡಿ ಏಣಿಕೆಯಲ್ಲಿ ಹಣ ದುರುಪಯೋಗ:
## ಸರ್ಕಾರಿ ಅಧಿಕಾರಿಯ ಕರ್ತವ್ಯಲೋಪ

ರಾಮನಗರ, ತಾಲ್ಲೂಕಿನ ಕೈಲಾಂಚ ಹೋಬಳಿಯ ಅವ್ವೇರಹಳ್ಳಿಯ ಶ್ರೀ ರೇವಣಸಿದ್ದೇಶ್ವರ ಸ್ವಾಮಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಎನ್. ಜಗದೀಶ್ಗೌಡ ಅವರು ಈ ಹಿಂದೆ ಮಾಗಡಿ ತಾಲ್ಲೂಕಿನ ಸಾರ್ವನದುರ್ಗ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದಲ್ಲಿ ಕಾರ್ಯ ನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆ ಅವಧಿಯಲ್ಲಿ 2025ರ ಡಿಸೆಂಬರ್ 24ರಂದು ನಡೆದ ಹುಂಡಿ ಏಣಿಕೆಯಲ್ಲಿ ಹಣ ದುರುಪಯೋಗ ಮಾಡಿ ಸರ್ಕಾರಿ ಕೆಲಸವನ್ನು ಸಮರ್ಪಕವಾಗಿ/ ಪಾರದರ್ಶಕವಾಗಿ ನಿರ್ವಹಿಸದೇ ಕರ್ತವ್ಯಲೋಪ ತೋರಿ ಬೇಜವಾಬ್ದಾರಿತನ ಮತ್ತು ನಂಬಿಕೆ ದ್ರೋಹವೆಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಅವರ ಮೇಲಿನ ಆರೋಪಗಳ ಕುರಿತು ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10(1)(ಡಿ)ರಡಿ ನಿಲಂಬನೆಯಲ್ಲಿಟ್ಟು ಬೆಂಗಳೂರಿನ ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರು ಹಾಗೂ ಶಿಸ್ತು ಪ್ರಾಧಿಕಾರಿ ಶರತ್ ಬಿ. ಅವರು ಆದೇಶ ಹೊರಡಿಸಿದ್ದಾರೆ.

ಇವರು ನಿಲಂಬನಾ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೇ ಕೇಂದ್ರಸ್ಥಾನ ಬಿಡುವಂತಿಲ್ಲ ಮತ್ತು ಇವರ ನಿಲಂಬನಾ ಅವಧಿಯಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ, 1958ರ ನಿಯಮ 98ರಡಿ ಜೀವನಾಧಾರ ಭತ್ಯೆಗೆ ಅರ್ಹರಾಗಿರುತ್ತಾರೆ ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ.

## ಬಾಲಕನ ಪತ್ತೆಗೆ ಮನವಿ

ರಾಮನಗರ, : ಹಾರೋಹಳ್ಳಿ ಹೋಬಳಿಯ ಸೊಂಟೇನಹಳ್ಳಿ ಗ್ರಾಮದ ನಿವಾಸಿ ಚಿರು ಬಿನ್ ರಾಜೇಶ್ (12 ವರ್ಷ) ಕಾಣೆಯಾಗಿದ್ದಾರೆ ಎಂದು ಪೊಲೀಸ್ ಠಾಣೆಗೆ ದೂರು ದಾಖಲಾಗಿದೆ.



ಚಹರೆಯ ವಿವರ:– ಸಾಧಾರಣ ಮೈಕಟ್ಟು, ದುಂಡುಮುಖ, ಎಣ್ಣೆಗೆಂಪು ಮೈಬಣ್ಣ, 4.5 ಅಡಿ ಎತ್ತರ, ಇವರು ಕಾಣೆಯಾಗುವಾಗ ಕೇಸರಿ ಬಣ್ಣದ ಟೀ ಶರ್ಟ್ ಹಾಗೂ ಸಿಮೆಂಟ್ ಬಣ್ಣದ ನಿಕ್ಕರ್ ಧರಿಸಿರುತ್ತಾರೆ. ಇವರು ಕಂಡು ಬಂದರೆ ಆರಕ್ಷಕ ಉಪ ನಿರೀಕ್ಷಕರು, ಮಹಿಳಾ ಪೊಲೀಸ್ ಠಾಣೆ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ. ಇವರನ್ನು ಸಂಪರ್ಕಿಸುವಂತೆ ಕೋರಲಾಗಿದೆ.

## ತ್ರಿಪದಿಗಳ ಮೂಲಕ ಜನರನ್ನು ಜಾಗೃತಗೊಳಿಸಿದವರು: ಸಂತ ಕವಿ ಸರ್ವಜ್ಞ



ರಾಮನಗರ, ಜನರ ಕವಿ ಎಂದು ಪ್ರಸಿದ್ಧರಾದವರು ಸಂತ ಕವಿ ಸರ್ವಜ್ಞ, ಸಂಸ್ಕೃತಿ ದೃಷ್ಟಿಯಿಂದ ಕನ್ನಡ ಸಾಹಿತ್ಯ ಭಂಡಾರದಲ್ಲಿ ಉಜ್ವಲ ರತ್ನ, ತ್ರಿಪದಿಗಳ ಬ್ರಹ್ಮ, ತ್ರಿಪದಿಗಳ ಚಕ್ರವರ್ತಿ ಎಂಬ ಬಿರುದುಗಳನ್ನು ಪಡೆದು ಪ್ರಸಿದ್ಧರಾದವರು. ತ್ರಿಪದಿಗಳ ಮೂಲಕ ಜನರನ್ನು ಜಾಗೃತಗೊಳಿಸಿದರು ಎಂದು ಜಾನಪದ ಲೋಕದ ಕ್ಯೂರೇಟರ್ ಡಾ. ಯು.ಎಂ. ರವಿ ಅವರು ತಿಳಿಸಿದರು.

ಅವರು ಫೆ.20ರ ಶುಕ್ರವಾರ ನಗರದ ಕಂದಾಯ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಸಂತ ಕವಿ ಸರ್ವಜ್ಞ ಜಯಂತಿ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

ಹದಿನಾರನೇ ಶತಮಾನದಲ್ಲಿ ಹಾವೇರಿ ಜಿಲ್ಲೆಯ ಅಬಲೂರಿನಲ್ಲಿ ಜನಿಸಿದರು. ಉತ್ತಂಗಿ ಚನ್ನಪ್ಪ ಇವರ ಸಾಹಿತ್ಯವನ್ನು ಸಂಗ್ರಹಿಸಿದ್ದಾರೆ. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಸರ್ವಜ್ಞ ಹೇಳದ ವಿಚಾರಗಳಿಲ್ಲ. ತ್ರಿಪದಿಗಳ ವ್ಯಾಪ್ತಿ ಒಳಗಡೆ ಬಳಸದೆ ಇರುವಂತ ವಿಷಯಗಳೆ ಇಲ್ಲ ಎನ್ನಬಹುದು. ಮೂಢನಂಬಿಕೆ, ಜಾತಿ ಪದ್ಧತಿ, ಸಾಮಾಜಿಕ ಅಸಮಾನತೆ, ಜನಸಾಮಾನ್ಯರಿಗೆ ಸಾಮಾಜಿಕ, ನೈತಿಕ, ಧಾರ್ಮಿಕ, ಮೌಲ್ಯಗಳನ್ನು ಸಮಾಜಕ್ಕೆ ನೀಡಿದ್ದಾರೆ ಎಂದರು.

ತ್ರಿಪದಿ ಕವಿ ತತ್ವಜ್ಞಾನಿ, ಸಮಾಜ ಸುಧಾರಕ. ಒಂದು ಕಡೆ ನಿಂತ ಸಂಸಾರಿಯಲ್ಲ ಸಂಸಾರಿಗಳ ಉದ್ಧಾರಕ್ಕಾಗಿ ಸದಾ ಸಂಚಾರ ಕೈಗೊಂಡ ಮಹಾಂತ ಜಂಗಮ. ಎಲ್ಲಾ ವರ್ಗದ ಸಮಾಜವನ್ನು ಎಲ್ಲ ಮನೋಧರ್ಮದ ಜನರನ್ನು ಜೀವನದ ಕಷ್ಟ ಸುಖಗಳನ್ನು ಒಳಿತು ಕೆಡುಕುಗಳನ್ನು ಕಣ್ಣಾರೆ ಕಂಡ ಅಪಾರವಾದ ಅನುಭವಿ. ಉದಾರವಾದ, ಮಾನವೀಯ ಅನುಕಂಪ, ಉನ್ನತ ಆಧ್ಯಾತ್ಮ ನಿಲುವು ಇವುಗಳ ಕಾವ್ಯ ಪ್ರತಿಭೆ. ಊರಿಂದ ಊರಿಗೆ ತಿರುವುತ್ತಾ ತನಗೆ ಅನಿಸಿದ್ದನ್ನು ನಿರ್ಭಯವಾಗಿ, ಸತ್ಯವನ್ನ ಸಾರುತ್ತ ಯಾರ ಹಂಗೂ ಇಲ್ಲದೆ ಜಂಗಮ ಪ್ರವರ್ತನಂತೆ ತಿರುಗಿದನು. ಒಳಿತನ್ನು ಕಂಡಲ್ಲಿ ಹೊಗಳಿದನು, ತಲೆಬಾಗಿದನು, ಕೆಡುಕನ್ನು ಕಂಡಲ್ಲಿ ಕೆರಳಿದನು, ಖಂಡಿಸಿದರು. ಇವರ ಕಠೋರ ನುಡಿಗಳು ಕೂಡ ಪ್ರಿಯವಾಗುತ್ತದೆ. ಅನುಭವ ಪೂರ್ವಕ ವಚನಗಳ ಮೂಲಕ ಜನರ ಜೀವನದ ಮೇಲೆ ಪ್ರಭಾವ ಬೀರಿದನು ಎಂದು ಹೇಳಿದರು.

ಪಂಡಿತ ಪಾಮರರೆಲ್ಲರ ಮನಸ್ಸನ್ನು ಸೆರೆಹಿಡಿದವು. ಇವರಿಂದ ಕನ್ನಡ ಭಾಷೆ ಹೊಸ ಶಕ್ತಿಯನ್ನು ಪಡೆಯಿತು. ಇವರ ವಚನದಲ್ಲಿ ರಾಷ್ಟ್ರಭಕ್ತಿ ಇದೆ, ಜಾತಿ ಮತದ ವಿಚಾರ ಇದೆ, ಮೂಢ, ಅಧಮ ಈ ವಿಚಾರವು ಸೇರಿದಂತೆ ಮೂಢನಂಬಿಕೆ, ಜ್ಞಾನದ ಶಕ್ತಿ, ಗುರುವಿನ ಮಹತ್ವ, ಜಾತೀಯತೆ, ಅನ್ನದ ಪ್ರಾಮುಖ್ಯತೆ, ಮಾತು ತಪ್ಪುವ ವಿಚಾರ ಅಲ್ಲದೆ ಸಜ್ಜನರ ವಿಚಾರ, ಜಿಪುಣ, ರೈತ, ಕೃಷಿ, ವಿವಿಧ ಕಸುಬುಗಳು, ಸಾಲ ಪಡೆದವರ, ಸಾಲ ಕೊಟ್ಟವನು, ನೀತಿ ನಿಯಮಗಳು, ಸತ್ಯ ಧರ್ಮದ ವಿಚಾರ, ಕಾಯಕ ಕರ್ಮದ ವಿಚಾರ ಹೀಗೆ ಎಲ್ಲವೂ ಇವರ ತ್ರಿಪದಿಗಳ ಸಾಲುಗಳಲ್ಲಿವೆ. ಇದರಿಂದ ಕನ್ನಡ ಸಾಹಿತ್ಯ ಶ್ರೀಮಂತವಾಗಿದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸತೀಶ್ ಅವರು ಮಾತನಾಡಿ, ಸರ್ವಜ್ಞರು ತ್ರಿಪದಿಗಳ ಬ್ರಹ್ಮರಾಗಿರುತ್ತಾರೆ. ಸರ್ವಜ್ಞರು ಸರ್ವೇ ಜನ ಸುಖಿನೋ ಭವಂತು ಎಂಬ ಅಂಶಗಳನ್ನಿಟ್ಟುಕೊಂಡು ತ್ರಿಪದಿಗಳನ್ನು ರಚಿಸಿರುತ್ತಾರೆ. ಸಮಾಜದಲ್ಲಿ ಎಲ್ಲಾ ಹಂತದಲ್ಲೂ ಎಲ್ಲರಿಗೂ ಕಟ್ಟಕಡೆಯ ವ್ಯಕ್ತಿಗೆ ಸೌಲಭ್ಯಗಳು ದೊರೆಯಬೇಕೆಂಬ ಆಶಯದೊಂದಿಗೆ ಅವರು ಸುಮಾರು 7 ಸಾವಿರ ತ್ರಿಪದಿಗಳನ್ನು ರಚಿಸಿರುತ್ತಾರೆ ಎಂದು ತಿಳುದುಬಂದಿದೆ. ಇಂತಹ ಮಹನೀಯರ ಬಗ್ಗೆ ವಿಶೇಷವಾಗಿ ಶಾಲಾ ಮಕ್ಕಳಿಗೆ ಹಾಗೂ ಇಂದಿನ ಯುವ ಪೀಳಿಗೆಗೆ ತಿಳಿಸಬೇಕಾಗಿರುವುದು ಎಲ್ಲರ ಕರ್ತವ್ಯವಾಗಿದೆ ಎಂದರು.

ಹಿಂದುಳಿದ ವರ್ಗಗಳ ಮಹಾ ಒಕ್ಕೂಟದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ. ವಿ. ನಾರಾಯಣ್ ಅವರು ಮಾತನಾಡಿದರು.

## ರಂಗಾಪುರ ಸುಕ್ಷೇತ್ರದಲ್ಲಿ ಪೀಠಾರೋಹಣದ
## ಸುವರ್ಣ ಮಹೋತ್ಸವದ ಸಮಾಲೋಚನಾ ಸಭೆ



ತಿಪಟೂರು : ತಾಲ್ಲೂಕಿನ ಕೆರೆಗೋಡಿ ರಂಗಾಪುರ ಸುಕ್ಷೇತ್ರದ ವತಿಯಿಂದ ಪರಮ ಪೂಜ್ಯ 7ನೇಯ ಶ್ರೀ ಶ್ರೀ ಶ್ರೀ ಗುರುಪರದೇಶಿಕೇಂದ್ರ ಮಹಾಸ್ವಾಮೀಜಿಯವರ ಪೀಠಾರೋಹಣದ "ಸುವರ್ಣ ಮಹೋತ್ಸವ" ಅಂಗವಾಗಿ ಹಿರಿಯ ವಿದ್ಯಾರ್ಥಿಗಳು ಹಾಗೂ ಶ್ರೀ ಕ್ಷೇತ್ರಾಭಿಮಾನಿಗಳ ಸಮಾಲೋಚನಾ ಸಭೆಯನ್ನು ಫೆ.22 ಭಾನುವಾರ ಬೆಳಗ್ಗೆ 11.00 ಗಂಟೆಗೆ ಏರ್ಪಡಿಸಲಾಗಿದೆ.

ರಂಗಾಪುರ ಸುಕ್ಷೇತ್ರ ಹಿರಿಯ ವಿದ್ಯಾರ್ಥಿಗಳ ಹಾಗೂ ಶ್ರೀ ಕ್ಷೇತ್ರಾಭಿಮಾನಿಗಳ ಸಂಘ (ರಿ.) ವತಿಯಿಂದ ಸುಕ್ಷೇತ್ರದ ಆವರಣದಲ್ಲಿ ಪರಮಪೂಜ್ಯರ ದಿವ್ಯ ಸಾನಿಧ್ಯದಲ್ಲಿ ಸಭೆ ನಡೆಯಲಿದೆ.ಇದಕ್ಕೂ ಮೊದಲು 05–12–2025ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ, 7ನೇಯ ಶ್ರೀ ಗುರುಪರದೇಶಿಕೇಂದ್ರ ಮಹಾಸ್ವಾಮೀಜಿಯವರು ಕ್ಷೇತ್ರಾಧಿಪತಿಗಳಾಗಿ 50 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಪೀಠಾರೋಹಣದ ಸುವರ್ಣ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸುವ ನಿರ್ಧಾರ ಕೈಗೊಳ್ಳಲಾಗಿದೆ. ಮಹೋತ್ಸವದ ಸವಿ ನೆನಪಿಗಾಗಿ ಸ್ಮಾರಕ ಭವನ ನಿರ್ಮಾಣ, ಪುರಾತನ ಮಠದ ಮನೆಗೆ ಬದಲಾಗಿ ನೂತನ ಮಠ ನಿರ್ಮಾಣ ಹಾಗೂ ಶ್ರೀಮಠದ ಸಮಗ್ರ ಅಭಿವೃದ್ಧಿಗಾಗಿ ಹೊಸ ಯೋಜನೆಗಳನ್ನು ರೂಪಿಸುವ ವಿಚಾರಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಯಲಿದೆ.

ಕ್ಷೇತ್ರದ ಹಿರಿಯ ವಿದ್ಯಾರ್ಥಿಗಳು ಹಾಗೂ ಅಭಿಮಾನಿಗಳ ಸಲಹೆ–ಸೂಚನೆಗಳನ್ನು ಪಡೆಯುವುದು ಸಭೆಯ ಮುಖ್ಯ ಉದ್ದೇಶವಾಗಿದೆ. ಶ್ರೀಮಠದ ಅಭಿವೃದ್ಧಿಗೆ ಸದಾ ಬೆನ್ನೆಲುಬಾಗಿ ನಿಂತಿರುವ ಭಕ್ತರು, ಅಭಿಮಾನಿಗಳು ಹಾಗೂ ಸಂಘದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಸಂಘದ ಪದಾಧಿಕಾರಿಗಳು ಮನವಿ ಮಾಡಿದ್ದಾರೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

## ಹರ್ದೀಪ್ ಸಿಂಗ್ ಪುರಿಯವರನ್ನು ಕೇಂದ್ರ ಸಂಪುಟದಿಂದ ವಜಾ ಮಾಡಬೇಕು–ಸಿಪಿಐ(ಎಂ) ಆಗ್ರಹ

ಪ್ರತಿದಿನವೂ ಪ್ರಕಟಗೊಳ್ಳುತ್ತಿರುವ ಎಪ್ಸ್ಟೀನ್ ಕಡತಗಳು ಅತ್ಯಂತ ಅಸಹ್ಯ ಮತ್ತು ಹೇಯಕರ ವಿಷಯಗಳನ್ನು ಒಳಗೊಂಡಿದೆ.ಯು ಎಸ್ ನ (ಅಮೆರಿಕಾ) ನ್ಯಾಯ ಇಲಾಖೆ ಮತ್ತು ಟ್ರಂಪ್ ಆಡಳಿತ ಈ ಪ್ರಕರಣವನ್ನು ಮುಚ್ಚಿಹಾಕಲು ಭಾರಿ ಪ್ರಯತ್ನ ನಡೆಸುತ್ತಿದ್ದರೂ, ಸತ್ಯಸಂಗತಿಗಳು ಹೊರಬರುತ್ತಿವೆ.




ರಾಜಕಾರಣಿಗಳು, ಹಣಕಾಸು ದೊರೆಗಳು, ತಂತ್ರಜ್ಞಾನ ದೈತ್ಯರು ಮತ್ತು ಪ್ರಸಿದ್ಧ ಅಧಿಕಾರಸ್ಥ ಗಣ್ಯರನ್ನು ಒಳಗೊಂಡ ಕ್ರಿಮಿನಲ್ ಜಾಲದ ಆಕ್ರಮಣಕಾರಿ ಅಪರಾಧ ಸ್ವರೂಪದ ಭಂಡತನಕ್ಕೆ ಅನುಕೂಲ ಮಾಡಿ ಕೊಡುತ್ತಿದ್ದ ಮುಖ್ಯಸ್ಥ ಈ ಎಪ್ಸ್ಟೀನ್ ಬಗ್ಗೆ ಯಾವುದೇ ಸಂದೇಹವಿಲ್ಲ.

ಹಲವಾರು ದೇಶಗಳಲ್ಲಿ ಇದರಲ್ಲಿ ಭಾಗಿಯಾದವರ ಮೇಲೆ ನಿರ್ದಿಷ್ಟ ಕಾನೂನು ಮತ್ತು ಶಿಕ್ಷೆಯ ಕ್ರಮಗಳನ್ನು ಪ್ರಾರಂಭಿಸಲಾಗಿದೆ.

ರಾಜಕುಮಾರ ಆಂಡ್ರ್ಯೂನ ಬಿರುದುಗಳನ್ನು ರದ್ದುಗೊಳಿಸಲಾಗಿದೆ ಮತ್ತು ಆತನನ್ನು ಯುಕೆಯಲ್ಲಿ (ಇಂಗ್ಲೆಂಡ್) ಬಂಧಿಸಲಾಗಿದೆ. ಇತರ ಹಲವಾರು ಜನರನ್ನು ಆಯಾ ದೇಶಗಳಲ್ಲಿನ ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡುವಂತೆ ಬಲವಂತ ಮಾಡಲಾಗಿದೆ. ಭಾರತದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಿ ಹರ್ದೀಪ್ ಸಿಂಗ್ ಪುರಿ ಮತ್ತು ಕೈಗಾರಿಕೋದ್ಯಮಿ ಅನಿಲ್ ಅಂಬಾನಿ ಇದರಲ್ಲಿ ಭಾಗಿಯಾಗಿರುವುದಕ್ಕೆ ಸ್ಪಷ್ಟ ಪುರಾವೆಗಳಿವೆ. ಹಾಗಿದ್ದೂ ಒಂದು ವಿವರಣೆಯನ್ನು ಕೊಡುವಂತೆಯಾಗಲಿ, ಮತ್ತು ಅವರ ಹೊಣೆಗಾರಿಕೆಯನ್ನು ಖಚಿತಪಡಿಸುವ ಯಾವುದೇ ಪ್ರಯತ್ನವನ್ನು ಒಕ್ಕೂಟ ಸರ್ಕಾರ ಮಾಡುತ್ತಿಲ್ಲ.

ಸಂಸತ್ತಿನ ಹಿಂದಿನ ಅಧಿವೇಶನದಲ್ಲಿ ಎಪ್ಸ್ಟೀನ್ ಕಡತಗಳ ಕುರಿತು ಯಾವುದೇ ಚರ್ಚೆಗೆ ಅವಕಾಶ ನೀಡಲಿಲ್ಲ. ಸರಿಯಾದ ಪುರಾವೆಗಳು ಲಭ್ಯವಿರುವಾಗಲೂ ಹರ್ದೀಪ್ ಸಿಂಗ್ ಪುರಿ, ಪತ್ರಿಕಾಗೋಷ್ಠಿ ನಡೆಸಿ ಅಲ್ಲಿ ಸುಳ್ಳು ಹೇಳಿ ಸಿಕ್ಕಿಬಿದ್ದಿದ್ದಾರೆ. ಆದರೂ, ಅವರನ್ನು ವಜಾಗೊಳಿಸುವ ಬದಲು, ಎಲ್ಲಾ ರೀತಿಯ ವಂಚಕ ವಿಧಾನಗಳಿಂದ ಅವರನ್ನು ರಕ್ಷಿಸಲಾಗುತ್ತಿದೆ.

ಈ ಪರಿಸ್ಥಿತಿಯಲ್ಲಿ, ರಾಷ್ಟ್ರೀಯ ಮುಜುಗರ ಮತ್ತು ಅವಮಾನವನ್ನು ಎದುರಿಸಲು ಹರ್ದೀಪ್ ಸಿಂಗ್ ಪುರಿ ಅವರನ್ನು ಕೇಂದ್ರ ಮಂತ್ರಿಮಂಡಲದಿಂದ ವಜಾಗೊಳಿಸಬೇಕೆಂದು ಸಿಪಿಐ(ಎಂ) ಪ್ರಧಾನ ಮಂತ್ರಿಗಳನ್ನು ಆಗ್ರಹಪೂರ್ವಕವಾಗಿ ಒತ್ತಾಯಿಸಿದೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

### ಗಾದೆ ಮಾತುಗಳು

1. ಸ್ವರ್ಗದಲ್ಲಿ ಸೇವೆಗೈಯುವುದಕ್ಕಿಂತ ನರಕದಲ್ಲಿ ಆಳುವುದೇ ಲೇಸು.
2. ತಾಯಿಯನ್ನು ಹೊಡೆಯಬಾರದು, ಗುಬ್ಬಿಯ ಗೂಡನ್ನು ತೆಗೆಯಬಾರದು.
3. ನಾಯಿಯು ನಮ್ಮನ್ನು ಕಚ್ಚಿದರೆ ನಾಯಿಯನ್ನು ಕಚ್ಚಲು ನಮ್ಮಿಂದ ಆಗುವುದೇ?
4. ಬೆಲ್ಲ ಇದ್ದಲ್ಲಿ ನೊಣ ತಿರುಗಾಡಿದಂತೆ.
5. ಹುಣಸೆ ಹುಳಿಯೆಂದು ಅಂಬಡೆ ತಿಂದ ಹಾಗೆ.
6. ಮೃತ್ಯು ಬಂದ ಮೇಲೆ ವೈದ್ಯ ಬಂದ.
7. ಶಸ್ತ್ರದಿಂದಾದ ಗಾಯ ಮಾಯುತ್ತದೆ, ನಾಲಿಗೆಯಿಂದಾದ ಗಾಯ ಮಾಯುವುದಿಲ್ಲ.

